# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಶನಿವಾರ, ಆಗಸ್ಟ್ 10, 2024

ಸಂಪುಟ : 51 ಸಂಚಿಕೆ : 88 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಜಾವಲಿನ್‌ನಲ್ಲಿ ನೀರಜ್ ಚೋಪ್ರಾಗೆ ಬೆಳ್ಳಿ



ನವದೆಹಲಿ, ಆ. 9 - ಜಾವಲಿನ್ ಎಸೆತಗಾರ ನೀರಜ್ ಚೋಪ್ರಾ ಅವರು ಒಲಂಪಿಕ್ ಪಂದ್ಯಾವಳಿಯಲ್ಲಿ ಬೆಳ್ಳಿ ಪದಕ ಪಡೆದಿದ್ದಾರೆ. ಕಳೆದ ಒಲಂಪಿಕ್‌ನಲ್ಲಿ ಅವರು ಬಂಗಾರದ ಪದಕ ಪಡೆದಿದ್ದರು.

ನೀರಜ್ ಅವರು ಅತ್ಯುತ್ತಮ ಪ್ರಯತ್ನ ನಡೆಸಿ 89.45 ಮೀಟರ್ ದೂರಕ್ಕೆ ಜಾವಲಿನ್ ಎಸೆದರು. ಆದರೆ ಪಾಕಿಸ್ತಾನದ ಅರ್ಷದ್ ನದೀಮ್ ಅವರು ಅಚ್ಚರಿಯ 92.97 ಮೀಟರ್ ದೂರಕ್ಕೆ ಜಾವಲಿನ್ ಎಸೆಯುವುದರ ಮೂಲಕ ಬಂಗಾರದ ಪದಕ ಪಡೆದರು.


ನಂತರ ಮಾತನಾಡಿದ ಚೋಪ್ರ, ನನ್ನ ಮೊಣಕಾಲಿಗೆ ಗಾಯವಾಗಿತ್ತು. ಜಾವಲಿನ್ ಎಸೆಯುವಾಗ ನನ್ನ ಬಹುತೇಕ ಗಮನ ಗಾಯದ ಕಡೆಗೆ ಇತ್ತು. ಶಸ್ತ್ರ ಚಿಕಿತ್ಸೆಗಾಗಿ ನನ್ನ ಬಳಿ ಸಮಯ ಇರಲಿಲ್ಲ ಎಂದು ಹೇಳಿದರು. ಇನ್ನೂ ನನ್ನಲ್ಲಿ ಸಾಕಷ್ಟು ಚೈತನ್ಯ ಇದೆ. ಇನ್ನೂ ಸಾಧಿಸಬಲ್ಲೆ ಎಂಬ ವಿಶ್ವಾಸ ಇದೆ. ಸಾಧನೆ ಮಾಡದೆ ನನಗೆ ನೆಮ್ಮದಿ ಇಲ್ಲ ಎಂದು ಹೇಳಿದರು. ಟ್ರಾಕ್ ವಿಭಾಗದಲ್ಲಿ ಸತತ ಪದಕಗಳನ್ನು ಪಡೆದ ಮೂರನೇ ಭಾರತೀಯ ಚೋಪ್ರಾ ಆಗಿದ್ದಾರೆ.

ಕುಸ್ತಿಪಟು ಸುಶೀಲ್ ಕುಮಾರ್ ಹಾಗೂ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಅವರು ಸತತ ಒಲಂಪಿಕ್ ಪದಕಗಳನ್ನು ಪಡೆದಿದ್ದಾರೆ.

ಗ್ರೆನೆಡಾದ ಆಂಡರ್ಸನ್ ಪೀಟರ್ಸ್ ಅವರು 88.54 ಮೀಟರ್ ಎಸೆತದ ಮೂಲಕ ಕಂಚಿನ ಪದಕ ಪಡೆದರು.

ಅತ್ಯಂತ ಸ್ಪರ್ಧಾತ್ಮಕವಾಗಿದ್ದ ಅಂತಿಮ ಘಟ್ಟದಲ್ಲಿ ಏಳು ಆಟಗಾರರು 86 ಮೀಟರ್‌ಗೂ ಹೆಚ್ಚಿನ ದೂರ ಜಾವಲಿನ್ ಎಸೆಯಲು ಸಾಧ್ಯವಾಯಿತು.

## ಕುಸ್ತಿಯಲ್ಲಿ ಅಮನ್‌ಗೆ ಕಂಚು



ನವದೆಹಲಿ, ಆ. 9 - ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಒಲಂಪಿಕ್ ಪಂದ್ಯಾವಳಿಯಲ್ಲಿ ಪುರುಷರ ವಿಭಾಗದ 57 ಕೆಜಿ ವಿಭಾಗದಲ್ಲಿ ಅಮನ್ ಸೆಹ್ರಾವತ್ ಕಂಚಿನ ಪದಕ ಪಡೆದುಕೊಂಡಿದ್ದಾರೆ.

ಪ್ಯೂರ್ಟೋ ರಿಕಾದ ಡೇರಿಯನ್ ಕ್ರೂಜ್ ಅವರನ್ನು 13-5 ಅಂತರದಿಂದ ಸೋಲಿಸುವ ಮೂಲಕ ಸೆಹ್ರಾವತ್ ಈ ಪದಕ ಪಡೆದಿದ್ದಾರೆ. 2008ರ ಬೀಜಿಂಗ್ ಪಂದ್ಯಾವಳಿಯ ನಂತರದಿಂದ ಕುಸ್ತಿ ಪಟುಗಳು ನಿರಂತರವಾಗಿ ಪದಕ ಪಡೆಯುತ್ತಿದ್ದಾರೆ. ಈ ಬಾರಿಯೂ ಆ ಸಂಪ್ರದಾಯ ಮುಂದುವರೆದಿದೆ.

ಜಪಾನಿನ ಅಗ್ರ ಶ್ರೇಯಾಂಕಿತ ರೀ ಹಿಗುಚಿ ವಿರುದ್ಧ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಸೆಹ್ರಾವತ್ ಪರಾಭವಗೊಂಡಿದ್ದರು. ನಂತರ ಅವರು ಕಂಚಿನ ಪದಕಕ್ಕಾಗಿ ಡೇರಿಯನ್ ಕ್ರೂಜ್ ಜೊತೆ ಸೆಣಸಾಟ ನಡೆಸಿದ್ದರು.

ಪ್ರಸಕ್ತ ಪಂದ್ಯಾವಳಿಯಲ್ಲಿ ಭಾರತ ಒಂದು ಬೆಳ್ಳಿ ಹಾಗೂ ಐದು ಕಂಚಿನ ಪದಕಗಳನ್ನು ಪಡೆದುಕೊಂಡಿದೆ.









# ಬೇತೂರು ಬಿ. ಕರಿಬಸಪ್ಪ ನಿಧನ

ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ

ದಿ|| ಬುಡ್ನಾರಪ್ಪ ಬಸಪ್ಪನವರ ಮಗನಾದ

ಕಾಂಗ್ರೆಸ್ ಮುಖಂಡರೂ, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರೂ

ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಸದಸ್ಯರೂ ಆದ

**ಶ್ರೀ ಬೇತೂರು ಕರಿಬಸಪ್ಪ** ಅವರು

ದಿನಾಂಕ 10-08-2024ರ ಶನಿವಾರ ಬೆಳಗಿನ ಜಾವ 01-17 ಕ್ಕೆ

ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ ಸುಮಾರು 57 ವರ್ಷ ವಯಸ್ಸಾಗಿತ್ತು.

ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ

ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು

ದಿನಾಂಕ 10-08-2024ರ ಶನಿವಾರ ಮಧ್ಯಾಹ್ನ 2 ಗಂಟೆಗೆ

ಎಲೆಬೇತೂರು ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

ಬುಡ್ನಾರಪ್ಪ ವಂಶಸ್ಥರು ಹಾಗೂ ಎಲೆಬೇತೂರು ಗ್ರಾಮಸ್ಥರು

ಮೊ. : 9900565472, 9535851819



**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 40x60, 40x60 North ಅಕ್ಕ-ಪಕ್ಕ, 30x50 North, 30x45 East, 30x43 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
30x40 North, MBA ಕಾಲೇಜ್ ರೋಡಿಗಿದೆ. 22 1/2x40, 22 1/2x40 South ಅಕ್ಕ-ಪಕ್ಕ, ಭಗೀರಥ ಸರ್ಕಲ್ ಹತ್ತಿರ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 North, 40x60 North, 120 ಅಡಿ ರೋಡಿಗಿದೆ. 50x80 East, 40x60 North, 40x60 East, 30x50 West, ಪಾರ್ಕ್ ಎದುರುಗಡೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತಮುತ್ತ ಹೊಸ ಬಡಾವಣೆಗಳಲ್ಲಿ 30x46 ಪಶ್ಚಿಮ ಅಕ್ಕ-ಪಕ್ಕ, 30x45 ಪೂರ್ವ ಅಕ್ಕ-ಪಕ್ಕ, 30x40 ಪಶ್ಚಿಮ, 30x50 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ, 30x40 ಪೂರ್ವ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಹೊಸ ಮನೆ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಲೇಔಟ್ 5ನೇ ಕ್ರಾಸ್‌ನಲ್ಲಿ ಕುಂದುವಾಡ ಕೆರೆ ಹತ್ತಿರ, 30x50 ಸೈಟ್‌ನಲ್ಲಿ ಪಶ್ಚಿಮ ದಿಕ್ಕಿನ 2 ಬೆಡ್ ರೂಂನ ಮನೆ ಮಾರಾಟಕ್ಕಿದೆ.
ಮೊ : 97425 12125

**ಬೇಕಾಗಿದ್ದಾರೆ**
ಪತ್ರಿಕಾ ಕಚೇರಿಯಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ, ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಪ್ತಗಿರಿ ಸ್ಕೂಲ್ ಹತ್ತಿರ. ಸಂಪರ್ಕಿಸಿ :
83103 14540

**ಕಟ್ಟಡ ಬಾಡಿಗೆಗೆ ಇದೆ**
ಡಾಲರ್ಸ್ ಕಾಲೋನಿಯಲ್ಲಿ ಹಾಸ್ಟೆಲ್ / ನರ್ಸಿಂಗ್ ಹೋಂ ಪ್ರಾರಂಭಿಸಲು ಸೂಕ್ತವಾದ ಕಟ್ಟಡ ಬಾಡಿಗೆಗೆ ಇದೆ.
88674 46224

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಶಿವ-ಪಾರ್ವತಿಯಲ್ಲಿ 40x60 ಪೂರ್ವ 30x55 ಪೂರ್ವ ಅಕ್ಕ-ಪಕ್ಕ, ಹಳೆಕುಂದುವಾಡದಲ್ಲಿ 40x48 ಕಾರ್ನರ್ ಪೂರ್ವ-ದಕ್ಷಿಣ ಪಶ್ಚಿಮ 3 ಕಡೆ ರಸ್ತೆ ಇದೆ. ಸರ್ಕಾರಿ ನೌಕರರ ಬಡಾವಣೆಯಲ್ಲಿ 30x50 ಉತ್ತರ, 30x40 ಪೂರ್ವ ಸೈಟ್‌ಗಳು ಮಾರಾಟಕ್ಕಿವೆ. ಮಿಟ್ಲಕಟ್ಟೆಯಲ್ಲಿ 20 ಗುಂಟೆ ಜಮೀನು ಮಾರಾಟಕ್ಕೆ CC ರಸ್ತೆಗೆ ಇದೆ. 24x44 ಮನೆ KB ಬಡಾವಣೆಯಲ್ಲಿ ಮಾರಾಟಕ್ಕೆ ಇದೆ.
ಸಂಪರ್ಕಿಸಿ : ಸುರೇಶ್ ಪಿ.ಎಸ್. ಶಾಮನೂರು (ಪ್ರಾಪರ್ಟಿ ಅಡ್ವೈಸರ್)
84314 00907

**ಸೈಟ್, ಮನೆ ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಮನೆ (2400 sqft) 30x50, ಪಶ್ಚಿಮ, ಡಾಲರ್ಸ್ ಕಾಲೋನಿ ಸೈಟ್ 40x51, ಪಶ್ಚಿಮ, ಹಳೇ ಕುಂದವಾಡ ಸೈಟ್ 30x50 ಪಶ್ಚಿಮ
91481 25125

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2ಕೆಜಿ ಚೀಲಗಳು ರೂ. 25/- ಸ್ಥಳ : ದೊಡ್ಡಬಾತಿ
88920 08800

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 4 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರ ಸಭೆ ಡೋ. ನಂ. ಬ್ಯಾಂಕ್ ಸಾಲ ಸೌಲಭ್ಯವಿರುವ ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
ಸಂಪರ್ಕಿಸುವ ಸಮಯ : ಮಧ್ಯಾಹ್ನ ; 12 ರಿಂದ ಸಂಜೆ 5.00 ರವರೆಗೆ
08192 254736

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂ.ಸಿ.ಸಿ. ಬಿ ಬ್ಲಾಕ್, 9ನೇ ಮೇನ್, 2ನೇ ಕ್ರಾಸ್‌ನಲ್ಲಿ ಫಸ್ಟ್ ಫ್ಲೋರ್‌ನಲ್ಲಿ ಮನೆ ಬಾಡಿಗೆಗೆ ಇದೆ.
99726 75765

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

**ಮನೆ ಬಾಡಿಗೆಗೆ ಇದೆ**
1 BHK, ನಂ. 164, 10ನೇ ಕ್ರಾಸ್, ಎ ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
90351 09371

**ಹುಡುಗರು ಬೇಕಾಗಿದ್ದಾರೆ**
SSLC., ITI or Diploma ಪಾಸ್ / ಫೇಲ್ ಅಭ್ಯರ್ಥಿಗಳು ಸಿಸಿಟಿವಿ ಕೆಲಸಕ್ಕೆ ಬೇಕಾಗಿದ್ದಾರೆ. ನಗರವಾಸಿಗಳಿಗೆ ಮೊದಲ ಆದ್ಯತೆ
8722113803, 9611877204

**OFFICE SPACE FOR RENT**
1000 Sqft, 1st floor, 9th main, P.J. Extn. Davanagere.
98444 93755

**WANTED TEACHERS**
Any Degree With Excellent Communication in English, Davanagere
99641 10736

**FULLY AUTOMATIC**
ಗ್ಯಾಸ್ ಗೀಸರ್ ಎಕ್ಸ್‌ಚೇಂಜ್
1000/- Rs. Off
ಸೇಲ್ಸ್, ಸರ್ವೀಸ್‌ಗಾಗಿ
ಮರುತ್ ಎಂಟರ್ ಪ್ರೈಸಸ್
ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು, ಬಾಪೂಜಿ ಬ್ಯಾಂಕ್ ಹತ್ತಿರ, ದಾವಣಗೆರೆ.
98868 96574, 98458 67574

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಿನಾಂಕ : 09.09.2024 ರಿಂದ 16.09.2024ರ ವರೆಗೆ
7 ದಿನಗಳ ದಕ್ಷಿಣ ಭಾರತದ ಪ್ರವಾಸ
ಅಕ್ಟೋಬರ್ 16 ರಿಂದ 26ರವರೆಗೆ
ಅಯೋಧ್ಯ-ನೇಪಾಳ ಪ್ರವಾಸ
ನಮ್ಮಲ್ಲಿ ಶಾಲಾ-ಕಾಲೇಜುಗಳಿಗೆ ಪ್ಯಾಕೇಜ್ ದರದಲ್ಲಿ ಪ್ರವಾಸ ಕೈಗೊಳ್ಳಲಾಗುತ್ತದೆ.
94485 33928, 90086 26473

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಮಳಿಗೆ ಬಾಡಿಗೆಗಿದೆ**
**Shop For Rent**
ಬೆಳ್ಳುಳ್ಳಿ ಬಿಲ್ಡಿಂಗ್, ಪಿ.ಬಿ. ರೋಡ್, ಶ್ರೀ ಲಾಡ್ಜ್ ಎದುರು, ಗ್ರೌಂಡ್ ಫ್ಲೋರ್, 1400 ಚ.ಅ., 1ನೇ ಮಹಡಿ - 1400 ಚ.ಅ., 2ನೇ ಮಹಡಿ, 1400 ಚ.ಅ.
99022 79003

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ
$\frac{34+44}{2} \times 72$
ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
70196-74592

**ಜಮೀನು ಮಾರಾಟಕ್ಕಿದೆ**
ಹಿರಿಯೂರು ತಾಲೂಕು, ಚಿತ್ರದುರ್ಗ ಜಿಲ್ಲೆ, ಮಾರಿಕಣಿವೆಯ (ವಾಣಿವಿಲಾಸ ಸಾಗರ ) ದಲ್ಲಿರೋ ಯೋಗ್ಯವಾದ 5 ಎಕರೆ ಜಮೀನು ಮಾರಾಟಕ್ಕಿದೆ. ತೋಟ ರೆಸಾರ್ಟ್ , ಗೆಸ್ಟ್ ಹೌಸ್, ರೆಸಿಡೆನ್ಷಿಯಲ್ ಸ್ಕೂಲ್ ನಿರ್ಮಿಸಲು ಯೋಗ್ಯವಾಗಿದೆ.
99869 77025, 91104 04422

**ಸೈಟುಗಳು ಮಾರಾಟಕ್ಕಿವೆ**
ಹರಿಹರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ.
30x40, 30x50, 40x60
93431 10009

**WANTED**
Male Salesmen Part-Time / Full-Time At The Jockey Exclusive Showroom
Contact Us At:
98867 57688

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**REQUIRED**
**Tally Accountant at Kumarapattanam**
Contact
90606 71000

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing
97398 65711, 94822 44114

**ಕಲ್ಯಾಣ ಬೆಳಕು ವಧು-ವರರ ವೇದಿಕೆ**
ಜಂಗಮ ಮತ್ತು ಲಿಂಗಾಯತ ವಧು-ವರರ ಆನ್‌ಲೈನ್ ವೇದಿಕೆ - ಪ್ರವೇಶ ಶುಲ್ಕ ರೂ. 500/- ನಮ್ಮ ಗ್ರೂಪ್‌ಗಳಿಂದ ಮದುವೆ ನಿಶ್ಚಯವಾದರೆ ಯಾವುದೇ ಶುಲ್ಕ ಇರುವುದಿಲ್ಲ.
78291 46919

**ನೀರಾವರಿ ಜಮೀನು ಮಾರಾಟಕ್ಕಿದೆ**
ಚನ್ನಗಿರಿ ತಾಲ್ಲೂಕು, ನಲ್ಲುದುರೆ ಗ್ರಾಮದಲ್ಲಿ ನವಲೇಹಾಳ್‌ಗೆ ಹೋಗುವ ಮುಖ್ಯ ರಸ್ತೆಯ ಪಕ್ಕದಲ್ಲಿ 4 ಎಕರೆ 34 ಗುಂಟೆ ನೀರಾವರಿ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
99805 15443

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮಳಿಗೆ/ಗೋದಾಮು ಬಾಡಿಗೆಗೆ ಇದೆ**
ಡಿ.ಸಿ. ಆಫೀಸ್ ಹತ್ತಿರ, ಕರೂರು ಮುಖ್ಯರಸ್ತೆಗೆ ಹೊಂದಿಕೊಂಡಿರುವ ಮಳಿಗೆ/ಗೋದಾಮು ಬಾಡಿಗೆಗೆ ಇದೆ.
97394 68974

**WANTED**
Social Science teacher wanted for High school must be 5 years experienced.
Contact:
97315 55751, 73386 04513
73386 04512

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**Davangere Commercial Complex for sale**
with1500 sqft and Height 16ft Located in Bambo Bazar, 12th cross, Avilable with water facility, Davangere. For More details contact :
8660125491, 98453 63900

**ಸೋಲಾರ್ ವಾಟರ್ ಹೀಟರ್**
ಸೇಲ್ಸ್ ಸರ್ವೀಸ್ & ಎಕ್ಸ್‌ಚೇಂಜ್
99642 84060


**ನೇತ್ರ ದಾನ ಮಾಡಿ**
**ಅಂಧರ ಬಾಳಿಗೆ ಬೆಳಕಾಗಿ**

## ಡಿ.ಜಿ. ಮಹದೇವಪ್ಪ ನಿಧನ



ದಾವಣಗೆರೆ ತಾಲ್ಲೂಕು ಮುದಹದಡಿ ಗ್ರಾಮದ ವಾಸಿ

**ಡಿ.ಜಿ. ಮಹದೇವಪ್ಪ**

ಇವರು ದಿನಾಂಕ 09.08.2024ರ ಶುಕ್ರವಾರ ಸಂಜೆ 5 ಗಂಟೆಗೆ ನಿಧನರಾದರು. ಮೃತರಿಗೆ 62 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಮುದಹದಡಿ ಗ್ರಾಮದಲ್ಲಿ ದಿನಾಂಕ 10.08.2024ರ ಶನಿವಾರ ಮಧ್ಯಾಹ್ನ 12.30ಕ್ಕೆ ನೆರವೇರಲಿದೆ.

**ಇಂತಿ ದುಃಖತಪ್ತರು : ಮಗ ಡಾ. ಡಿ.ಜಿ. ನಾಗರಾಜ ಮತ್ತು ಪುತ್ರಿಯರು, ಮೊಮ್ಮಕ್ಕಳು, ಅಳಿಯಂದಿರು, ದೊಡ್ಡ ಗೌಡ್ರು ವಂಶಸ್ಥರು ಹಾಗೂ ಮುದಹದಡಿ ಗ್ರಾಮಸ್ಥರು.**

**ಮೊ : 91641 97976**


**ಸೋಫೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapna Cushion Work
Behind Vittal Temple, Maharaj Pet, Davanagere
98445 81966

**JOB OPPORTUNITY**
Female Office Assistant
Good In Office Work-Computer Skills Good In Customer Dealing Freshers can also apply B.Com., M.Com., & MBA
Cor Contact :
97312 18567
Send C.V-hardsoftdvg@gmail.com

**ಸೈಟುಗಳು ಮಾರಾಟಕ್ಕಿವೆ**
ಎಂ.ಸಿ.ಸಿ. 'ಬಿ' ಬ್ಲಾಕ್ 40x60, 17x60 ಶಿವ-ಪಾರ್ವತಿ 30x50, 30x50, 30x40, ಎಸ್.ಎಸ್. ಲೇಔಟ್ 40x60, 40x60, ಜೆ. ಹೆಚ್. ಪಟೇಲ್ ಬಡಾವಣೆ 30x50, 40x60 ಸಿದ್ದವೀರಪ್ಪ ಬಡಾವಣೆ 30x40 ಮನೆ.
ಪ್ರಶಾಂತ : 99643 16777

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬಾಡಿಗೆಗೆ ಇದೆ**
ಹದಡಿ ಮೇನ್ ರೋಡ್‌ನಲ್ಲಿ ನೆಲ ಮಹಡಿ & ಸೆಲ್ಲರ್ ಬಾಡಿಗೆಗೆ ಇದೆ.
96630 45888

**ಬಾಡಿಗೆಗೆ ಇದೆ**
ದಾವಣಗೆರೆ BIET ಕಾಲೇಜು ಹತ್ತಿರ (ಮೋರ್ ಸೂಪರ್ ಮಾರ್ಕೆಟ್ ಪಕ್ಕ) ಹೋಟೆಲ್ ನಡೆಸಲು ಸೂಕ್ತವಾದ ಕಟ್ಟಡ ಹಾಗು ಫಸ್ಟ್ ಫ್ಲೋರ್‌ನಲ್ಲಿ ಆಫೀಸ್ ಸ್ಪೇಸ್ ಬಾಡಿಗೆಗೆ ಇರುತ್ತದೆ.
ಮೊ : 88618 41515

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


## ವಕ್ಫ್ ಮಸೂದೆಗಾಗಿ 31 ಸದಸ್ಯರ ಸಮಿತಿ

ನವದೆಹಲಿ, ಆ. 9 - ವಕ್ಫ್ ತಿದ್ದುಪಡಿ ಮಸೂದೆ ಪರಿಶೀಲನೆ ಸಲುವಾಗಿ 31 ಸದಸ್ಯರ ಜಂಟಿ ಸಂಸದೀಯ ಸಮಿತಿ ರಚಿಸಲಾಗಿದೆ. ಇದರಲ್ಲಿ 21 ಸದಸ್ಯರು ಲೋಕಸಭೆ ಹಾಗೂ 10 ಸದಸ್ಯರು ರಾಜ್ಯಸಭೆಗೆ ಸೇರಿದವರಾಗಿದ್ದಾರೆ. ಸಮಿತಿಯು ಮುಂದಿನ ಅಧಿವೇಶನದ ಒಳಗೆ ವರದಿ ಸಲ್ಲಿಸಲಿದೆ

ಸಂಸದೀಯ ವ್ಯವಹಾರಗಳ ಸಚಿವಾಲಯ ಹೊಂದಿರುವ ಕಿರಣ್ ರಿಜಿಜು ಅವರು ಸದಸ್ಯರನ್ನು ನೇಮಿಸುವ ನಿಲುವಳಿಯನ್ನು ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಮಂಡಿಸಿದರು. ನಂತರ ಸದಸ್ಯರ ಹೆಸರುಗಳಿಗೆ ಅಂಗೀಕಾರ ನೀಡಲಾಯಿತು.

## ನಗರದಲ್ಲಿ ಇಂದು ಶಿವಗೋಷ್ಠಿ - 308

ಶಿವಗೋಷ್ಠಿ ಸಮಿತಿ, ಶ್ರೀ ಶಿವಕುಮಾರಸ್ವಾಮಿ ಮಹಾ ಮಂಟಪ ಹಾಗೂ ಸಾದರ ನೌಕರರ ಬಳಗ (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ಇಂದು ಸಂಜೆ 6.30 ಕ್ಕೆ ನಗರದ ಮಾಗನೂರು ಬಸಪ್ಪ ಶಾಲಾ ಸಮುಚ್ಛಯದ ಶ್ರೀ ಮಾಗನೂರು ಬಸಪ್ಪ ಸಭಾಂಗಣದಲ್ಲಿ 'ಶಿವಗೋಷ್ಠಿ -308 ಹಾಗೂ ಸ್ಮರಣೆ-82' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರ ಗೌಡ್ರು ಅಧ್ಯಕ್ಷತೆ ವಹಿಸುವರು. 'ಶರಣರ ದೃಷ್ಟಿಯಲ್ಲಿ ಕಾಯಕ ಮತ್ತು ದಾಸೋಹ' ಕುರಿತು ಸಹಾಯಕ ಪ್ರಾಧ್ಯಾಪಕ ಶಿವಪ್ಪ ಮಳ್ಳೂರ ಉಪನ್ಯಾಸ ನೀಡಲಿದ್ದಾರೆ.

ನಿವೃತ್ತ ಮುಖ್ಯೋಪಾಧ್ಯಾಯ ಎ. ಸಿದ್ದಲಿಂಗನಗೌಡ ಅವರು ಶರಣ ಕೆಂಚನಗೌಡರ ನಾಗಮ್ಮ ಚನ್ನಬಸವನಗೌಡ ಅವರ ಸ್ಮರಣೆ ಮಾಡಲಿದ್ದಾರೆ. ಕದಳಿ ಮಹಿಳಾ ವೇದಿಕೆ ಸದಸ್ಯರಿಂದ ವಚನ ಗಾಯನ ಏರ್ಪಾಡಾಗಿದೆ.

# ಕೃಷಿ ವಿಜ್ಞಾನ ಕೇಂದ್ರ ಕೃಷಿಯ ಜ್ಞಾನ ಭಂಡಾರ



## ಸಂಶೋಧನೆಗಳನ್ನು ಹೊಲಗಳಲ್ಲಿ ಅನುಷ್ಠಾನ ಮಾಡುತ್ತಿವೆ : ಜಿ.ಪಂ. ಸಿಇಒ ಸುರೇಶ್ ಬಿ. ಇಟ್ನಾಳ್



**ಕೃಷಿ ವಿಜ್ಞಾನ ಕೇಂದ್ರಗಳ ಸುವರ್ಣ ಮಹೋತ್ಸವದ ಅಂಗವಾಗಿ ನಗರದ ಐ.ಸಿ.ಎ.ಆರ್. - ತರಳಬಾಳು ಕೃಷಿ ವಿಜ್ಞಾನ ಕೇಂದ್ರಕ್ಕೆ ಆಗಮಿಸಿದ್ದ ಸುವರ್ಣ ಮಹೋತ್ಸವ ದೀಪವನ್ನು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್ ಸ್ವೀಕರಿಸಿ, ಮೆರವಣಿಗೆಯಲ್ಲಿ ಪಾಲ್ಗೊಂಡರು. ಈ ಸಂದರ್ಭದಲ್ಲಿ ಐಸಿಎಆರ್ - ಟಿ.ಕೆ.ವಿ.ಕೆ. ಮುಖ್ಯಸ್ಥ ಡಾ. ಟಿ.ಎನ್. ದೇವರಾಜ್ ಮತ್ತಿತರರು ಉಪಸ್ಥಿತರಿದ್ದರು.**

ದಾವಣಗೆರೆ, ಆ. 9 - ಕೃಷಿ ವಿಜ್ಞಾನ ಕೇಂದ್ರಗಳು ಜ್ಞಾನ ಭಂಡಾರವಾಗಿವೆ. ಇವುಗಳು ಸಂಶೋಧನೆಗಳು ಹಾಗೂ ತಂತ್ರಜ್ಞಾನವನ್ನು ರೈತರಿಗೆ ತಿಳಿಸುತ್ತಿವೆ. ಪ್ರಾತ್ಯಕ್ಷಿಕೆ ಮೂಲಕ ಹೊಲಗಳಲ್ಲಿ ಅನುಷ್ಠಾನ ಮಾಡುತ್ತಿವೆ ಎಂದು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್ ತಿಳಿಸಿದರು.

ಕೃಷಿ ವಿಜ್ಞಾನ ಕೇಂದ್ರಗಳ ಸುವರ್ಣ ಮಹೋತ್ಸವದ ಅಂಗವಾಗಿ ನಗರದ ಐ.ಸಿ.ಎ.ಆರ್. - ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಸುವರ್ಣ ಮಹೋತ್ಸವ ದೀಪದ ಸ್ವೀಕಾರ ಮತ್ತು ಅಭಿಮಾನದ ನಡಿಗೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿಗಳಲ್ಲಿ ಹಲವು ತಂತ್ರಜ್ಞಾನಗಳು ರೂಪುಗೊಳ್ಳುತ್ತವೆ. ಕೃಷಿ ವಿಜ್ಞಾನ ಕೇಂದ್ರಗಳು ರೈತರಿಗೆ ಈ ತಂತ್ರಜ್ಞಾನ ಒದಗಿಸುವ ಕೆಲಸ ಮಾಡುತ್ತಿವೆ ಎಂದರು.

ಕೃಷಿ ವಿಜ್ಞಾನ ಕೇಂದ್ರಗಳು ಕೃಷಿ, ರೇಷ್ಮೆ, ತೋಟಗಾರಿಕೆ, ಮೀನುಗಾರಿಕೆ ಸೇರಿದಂತೆ ಎಲ್ಲ ವಲಯಗಳ ಪರಿಣಿತರನ್ನು ಹೊಂದಿದೆ. ಆ ಮೂಲಕ ಸಮಗ್ರ ಕೃಷಿಗೆ ನೆರವು ನೀಡುತ್ತಿವೆ ಎಂದು ಇಟ್ನಾಳ್ ಹೇಳಿದರು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ ಅನ್ವಯ ಕೃಷಿ ಸಖಿ ಹಾಗೂ ಪಶು ಸಖಿ ಹುದ್ದೆಗಳನ್ನು ರೂಪಿಸಲಾಗಿದೆ. ಈ ಯೋಜನೆ ಮೂಲಕ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ತರಬೇತಿ ನೀಡಲಾಗುತ್ತಿದೆ. ಇವರ ಮೂಲಕ ಸಂಶೋಧನೆಯನ್ನು ರೈತರಿಗೆ ತಲುಪಿಸುವ ಕೆಲಸವನ್ನು ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರಗಳು ಕೈಗೊಳ್ಳುತ್ತಿವೆ ಎಂದರು.

ಜಿಲ್ಲೆಯಲ್ಲಿ 17 ರೈತ ಉತ್ಪಾದಕ ಕಂಪನಿಗಳಿವೆ. ಇವುಗಳ ಜೊತೆ ಕಾರ್ಯನಿರ್ವಹಿಸುತ್ತಿರುವ ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯಲ್ಲೂ ಭಾಗಿಯಾಗಿವೆ ಎಂದು ಇಟ್ನಾಳ್ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿರಿಗೆರೆಯ ತರಳಬಾಳು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸದಸ್ಯ ಹೆಚ್.ಬಿ. ಮುರುಗೇಶಪ್ಪ, ರೈತರು ಪ್ರಯೋಗಶೀಲರಾದಾಗ ಹಾಗೂ ಬಹು ಬೆಳೆ ಪದ್ಧತಿ ಅಳವಡಿಸಿಕೊಂಡಾಗ ಮಾತ್ರ ಆದಾಯ ಹೆಚ್ಚಿಸಲು ಸಾಧ್ಯ ಎಂದರು.

ತರಳಬಾಳು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸದಸ್ಯ ಇಟಗಿ ಶಿವಣ್ಣ ಮಾತನಾಡಿ, ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದಲ್ಲಿ ಮಕ್ಕಳಿಗೆ ಕೃಷಿ ಮಾಹಿತಿ ನೀಡಬೇಕಿದೆ. ಮಕ್ಕಳಿಗೆ ಕೃಷಿಯ ಬಗ್ಗೆ ತಿಳಿಸಿದಾಗ ಮಾತ್ರ ಈ ವಲಯದ ಬೆಳವಣಿಗೆ ಸಾಧ್ಯ ಎಂದು ಹೇಳಿದರು. ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಷಯ ತಜ್ಞ ಎಂ.ಜಿ. ಬಸವನಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಟಿ.ಎನ್. ದೇವರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದ ವೇದಿಕೆಯ ಮೇಲೆ ಸಿರಿಗೆರೆಯ ತರಳಬಾಳು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸದಸ್ಯ ಕೆ.ಜಿ. ಈಶ್ವರಪ್ಪ, ಕತ್ತಲಗೆರೆ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ದ ಮುಖ್ಯಸ್ಥ ಡಾ. ಆನಂದ್ ಕುಮಾರ್, ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಗುರುಪ್ರಸಾದ್, ರಾಘವೇಂದ್ರ ಹೈಟೆಕ್ ಪಿಯು ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಆರ್. ಅನಿಲ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಅಭಿಜ್ಞ ಪ್ರಾರ್ಥಿಸಿದರು. ಐಸಿಎಆರ್ - ಟಿ.ಕೆ.ವಿ.ಕೆ. ವಿಷಯ ತಜ್ಞ ಹೆಚ್. ಎಂ. ಸಣ್ಣಗೌಡ್ರ ಸ್ವಾಗತಿಸಿದರು. ವಿಷಯ ತಜ್ಞರಾದ ಡಾ. ಜಿ.ಕೆ. ಜಯದೇವಪ್ಪ ಹಾಗೂ ಡಾ. ಟಿ.ಜೆ. ಅವಿನಾಶ್ ನಿರೂಪಿಸಿದರು. ವಿಷಯ ತಜ್ಞ ಬಿ.ಓ. ಮಲ್ಲಿಕಾರ್ಜುನ ವಂದಿಸಿದರು.

### ಕೃಷಿಯಲ್ಲೂ ಕೋಟಿ ಗಳಿಸಿ

ಕೃಷಿಯಲ್ಲಿ ಹೆಚ್ಚು ಆದಾಯವಿಲ್ಲ ಎಂದು ಯುವಕರು ಕೃಷಿ ವಲಯದ ಕಡೆ ಆಸಕ್ತಿ ತೋರುತ್ತಿಲ್ಲ. ಆದರೆ, ಕೃಷಿ ವಲಯದಲ್ಲೂ ಕೋಟಿಗಳನ್ನು ಗಳಿಸಲು ಅವಕಾಶ ಇದೆ ಎಂದು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್ ಹೇಳಿದರು.

ವೇದಿಕೆಯ ಮೇಲಿರುವ ತರಳಬಾಳು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸದಸ್ಯ ಹೆಚ್.ಬಿ. ಮುರುಗೇಶಪ್ಪ ಅವರು ಕೃಷಿಯಲ್ಲಿ ಕೋಟಿಗಟ್ಟಲೆ ಆದಾಯ ಪಡೆದಿದ್ದಾರೆ ಎಂದರು.

ಈಗಿನ ಯುವ ಜನತೆಗೆ ಕೃಷಿಯ ಬಗ್ಗೆ ಆಸಕ್ತಿ ಕಡಿಮೆ. ಆದರೆ, ಕೃಷಿಯಿಂದಲೇ ಕೋಟ್ಯಾಧೀಶರಾಗಿರುವವರೂ ಇದ್ದಾರೆ ಎಂಬುದನ್ನು ಯುವಕರು ಮನಸ್ಸಿನಲ್ಲಿಟ್ಟುಕೊಳ್ಳಬೇಕು ಎಂದು ಇಟ್ನಾಳ್ ತಿಳಿಸಿದರು.

### ಟಿ.ಕೆ.ವಿ.ಕೆ.ಗೆ ಮೂರು ರಾಷ್ಟ್ರೀಯ ಪ್ರಶಸ್ತಿ

ತರಳಬಾಳು ಕೃಷಿ ವಿಜ್ಞಾನ ಕೇಂದ್ರಕ್ಕೆ ಈಗ 20 ವರ್ಷ ತುಂಬಿದ್ದು, ಮೂರು ರಾಷ್ಟ್ರೀಯ ಪ್ರಶಸ್ತಿ ಪಡೆದಿದೆ. ವಲಯ ಮಟ್ಟದ ರಾಷ್ಟ್ರೀಯ ಕೃಷಿ ವಿಜ್ಞಾನ ಕೇಂದ್ರ ಪ್ರಶಸ್ತಿ, ಪರಿಸರ ಸಂಬಂಧಿಸಿದ ನಿಕ್ರಾ ಪ್ರಶಸ್ತಿ ಹಾಗೂ ಬಾಳೆ ಅತ್ಯುತ್ತಮ ತಂತ್ರಜ್ಞಾನ ಅಭಿಯಾನಕ್ಕಾಗಿ ಪ್ರಶಸ್ತಿ ದೊರೆತಿವೆ. ಈ ಸಾಧನೆ ಮಾಡಿರುವ ದೇಶದ ಮೊದಲ ಕೃಷಿ ವಿಜ್ಞಾನ ಕೇಂದ್ರ ಇದಾಗಿದೆ ಎಂದು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಷಯ ತಜ್ಞ ಎಂ.ಜಿ. ಬಸವನಗೌಡ ಹೇಳಿದರು.

ದೇಶದಲ್ಲಿ ಒಟ್ಟು 731 ಕೃಷಿ ವಿಜ್ಞಾನ ಕೇಂದ್ರಗಳಿವೆ. ಈ ಪೈಕಿ ತರಳಬಾಳು ಕೆ.ವಿ.ಕೆ. ಮೊದಲ 50 ಸ್ಥಾನಗಳಲ್ಲಿದೆ ಎಂದವರು ಹೇಳಿದರು.

## 12ರಂದು ಅವಧೂತ ಗುರುಗಳಿಂದ ಆಶೀರ್ವಚನ ಕಾರ್ಯಕ್ರಮ

ದಾವಣಗೆರೆ, ಆ. 9- ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ ಸಿದ್ಧಿ ಸಮಾಧಿ ಯೋಗದಿಂದ ಶ್ರಾವಣ ಮಾಸದ ಪ್ರಯುಕ್ತ ಅವಧೂತ ಗುರುಗಳಿಂದ ಆಶೀರ್ವಚನ ಕಾರ್ಯಕ್ರಮವು ಇದೇ ದಿನಾಂಕ 12ರ ಸೋಮವಾರ ಸಂಜೆ 5.30ಕ್ಕೆ ನಗರದ ಪಿ.ಬಿ. ರಸ್ತೆಯಲ್ಲಿರುವ ಗೀತಾ ಮಂದಿರದಲ್ಲಿ ನಡೆಯಲಿದೆ.

ಮೈಸೂರಿನ ಶ್ರೀ ಅರ್ಜುನ್ ಅವಧೂತ ಗುರೂಜಿ ಅವರು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುವರು. ದಾವಣಗೆರೆ ಎಸ್.ಎಸ್.ವೈ. ಬ್ರಹ್ಮೋಪದೇಶಕರಾದ ರೇಣುಕಾ ಮಾತಾಜಿ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಎಸ್ಎಸ್‌ವೈ ಸಾಧಕರು ಹಾಗೂ ಬಾಡಾ ಕ್ರಾಸ್‌ನ ಶ್ರೀ ವೀರೇಶ್ವರ ಅಂಧ ಮಕ್ಕಳು ಹಾಗೂ ವಿದ್ಯಾರ್ಥಿಗಳಿಂದ ಭಜನೆ ನಡೆಯಲಿದೆ.

## ಭದ್ರಾ ಜಲಾಶಯಕ್ಕೆ ಇಂದು ಬಾಗಿನ

ದಾವಣಗೆರೆ ತಾಲ್ಲೂಕು ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಮಾರಾಟಗಾರರ ಸಂಘದ ವತಿಯಿಂದ ಇಂದು 12 ಗಂಟೆಗೆ ಭದ್ರಾ ಅಣೆಕಟ್ಟುಗೆ ಬಾಗಿನ ಅರ್ಪಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಮಂಜುನಾಥ್, ಖಜಾಂಚಿ ಕಿರಣ್ ಬಾಳೇಹೂಲದ್ ತಿಳಿಸಿದ್ದಾರೆ.

## ಶ್ರೀ ಅಂಬಾಭವಾನಿ ದೇವಸ್ಥಾನ ನಿರ್ಮಾಣ : ನಗರದಲ್ಲಿ ಇಂದು ಸಭೆ

ಮಹಾರಾಜಪೇಟೆಯಲ್ಲಿರುವ ಶ್ರೀ ಭಾವಸಾರ ಕ್ಷತ್ರಿಯ ದೈವ ಮಂಡಳಿಯ ಶ್ರೀ ವಿಠ್ಠಲ ಮಂದಿರ ದಲ್ಲಿ ಇಂದು ಸಂಜೆ 5 ಗಂಟೆಗೆ ಅಂಬಾಭವಾನಿ ದೇವಸ್ಥಾನದ ಜಮೀನಿನಲ್ಲಿ ದೇವಸ್ಥಾನ ನಿರ್ಮಾಣದ ಬಗ್ಗೆ ಪೂರ್ವಭಾವಿ ಸಭೆ ನಡೆಯಲಿದೆ.

ಸಮಾಜದ ಮಾಜಿ ಅಧ್ಯಕ್ಷ ರಾಘವೇಂದ್ರ ರಾವ್ ಗುಜ್ಜರ್ ಅವರ ನೇತೃತ್ವದಲ್ಲಿ ಏರ್ಪಾಡಾಗಿರುವ ಈ ಸಭೆಯಲ್ಲಿ ನಗರದ ಪಿ. ಬಿ. ರಸ್ತೆಯಲ್ಲಿರುವ ದೈವ ಮಂಡಳಿಯ ಜಮೀನಿನಲ್ಲಿ ಅಂಬಾಭವಾನಿ ದೇವಸ್ಥಾನ ನಿರ್ಮಾಣದ ಬಗ್ಗೆ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ

ದೈವ ಮಂಡಳಿ, ಭಜನಾ ಮಂಡಳಿ, ತರುಣ ಮಂಡಳ, ಕಲಾವತಿ ಮಹಿಳಾ ಮಂಡಳಿ, ರುಖುಮಾಯಿ ಮಹಿಳಾ ಮಂಡಳಿ, ಶ್ರೀ ದುರ್ಗಾ ಮಹಿಳಾ ಮಂಡಳಿ, ಇತರೆ ಎಲ್ಲಾ ಅಂಗ ಸಂಸ್ಥೆಗಳು, ಸಮಾಜ ಬಾಂಧವರು ಈ ಸಭೆಯಲ್ಲಿ ಪಾಲ್ಗೊಳ್ಳುವಂತೆ ದೈವ ಮಂಡಳಿಯ ಗೌರವಾಧ್ಯಕ್ಷ ಡಾ. ಜಯಪ್ರಕಾಶ್ ಮಾಳದಕರ್, ಅಧ್ಯಕ್ಷ ರಘು ಮುಸಳೆ, ಕಾರ್ಯದರ್ಶಿ ಈಶ್ವರ್ ರಾವ್ ಗುಜ್ಜರ್ ಕೋರಿದ್ದಾರೆ.

## ಒಲಂಪಿಕ್ ಪಂದ್ಯ : ಕುಸ್ತಿಯಲ್ಲಿ ಕಂಚು - ಅಭಿನಂದನೆ

ದಾವಣಗೆರೆ, ಆ.9- ಪ್ಯಾರೀಸ್‌ನಲ್ಲಿ ನಡೆಯುತ್ತಿರುವ ಒಲಂಪಿಕ್ ಪಂದ್ಯಾವಳಿಯಲ್ಲಿ ಪುರುಷರ ವಿಭಾಗದ 57 ಕೆ.ಜಿ. ವಿಭಾಗದಲ್ಲಿ ಅಮನ್ ಸೆಹ್ರಾವತ್ ಕಂಚಿನ ಪದಕ ಪಡೆದಿದ್ದು, ಅವರನ್ನು ರಾಜ್ಯ ಕುಸ್ತಿ ಸಂಘದ ಅಧ್ಯಕ್ಷ ಬಿ. ವೀರಣ್ಣ, ಖಜಾಂಚಿಯೂ ಆಗಿರುವ ಮಹಾನಗರ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಪೈಲ್ವಾನ್ ಅಭಿನಂದಿಸಿದ್ದಾರೆ.

## ಹರಿಹರ : 10 ಲಕ್ಷ ರೂ. ಮೌಲ್ಯದ ಗಾಂಜಾ ವಶ



ಹರಿಹರ, ಅ. 9- ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಮೂವರನ್ನು ಬಂಧಿಸಿರುವ ಇಲ್ಲಿನ ಪೊಲೀಸರು 10 ಲಕ್ಷ ರೂ. ಅಂದಾಜು ಮೌಲ್ಯದ 10 ಕೆ.ಜಿ ಗಾಂಜಾ ಮತ್ತು ಒಂದು ಬೈಕ್ ವಶಪಡಿಸಿಕೊಂಡಿದ್ದಾರೆ.

ನಗರ ಪೊಲೀಸ್ ಠಾಣೆಯಲ್ಲಿ ಕರೆದಿದ್ದ ತುರ್ತು ಪತ್ರಿಕಾಗೋಷ್ಠಿಯಲ್ಲಿ ಗ್ರಾಮಾಂತರ ಡಿವೈಎಸ್ಪಿ ಜಿ. ಎಸ್. ಬಸವರಾಜ್ ಈ ವಿಷಯ ತಿಳಿಸಿದರು.

ಗಸ್ತಿನಲ್ಲಿದ್ದ ನಗರ ಠಾಣೆಯ ಪಿಎಸ್ಐ ಶ್ರೀಪತಿ ಗಿನ್ನಿ ನೇತೃತ್ವದ ತಂಡವು ಹಂಸಾಗರ ಕಾಂಪೌಂಡ್ ಹತ್ತಿರದ ಇಂಡಸ್ಟ್ರಿಯಲ್ ಏರಿಯಾದಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಅವರು ಗಾಂಜಾವನ್ನು ಮಾರಾಟ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಅಂತರರಾಜ್ಯ ಮತ್ತು ಓರ್ವ ಸ್ಥಳೀಯ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಇನ್ಸ್‌ಪೆಕ್ಟರ್ ವಿಜಯಕುಮಾರ್, ಪಿಎಸ್ಐ ಶ್ರೀಪತಿ ಗಿನ್ನಿ, ಪೊಲೀಸ್ ಸಿಬ್ಬಂದಿ ನಾಗರಾಜ್ ಸುಣಗಾರ್, ಸತೀಶ್, ನಿಂಗರಾಜ್, ಸಿದ್ದೇಶ್, ಸಿದ್ದರಾಜ್, ರುದ್ರಸ್ವಾಮಿ, ರವಿನಾಯ್ಕ್, ರವಿಕುಮಾರ್ ಇತರರು ಹಾಜರಿದ್ದರು.

## ಜಗಳೂರು ತಾ.ಭೂನ್ಯಾಯ ಮಂಡಳಿಗೆ ಸದಸ್ಯರ ನೇಮಕ

ಜಗಳೂರು, ಆ.9- ತಾಲ್ಲೂಕು ಭೂ ನ್ಯಾಯಮಂಡಳಿಗೆ ನಾಲ್ಕು ಜನ ಸದಸ್ಯರನ್ನು ಸರ್ಕಾರ ನೇಮಕ ಮಾಡಿದೆ.

ಡಿ.ಪಿ.ಜಗಳೂರಯ್ಯ ಮರೇನಹಳ್ಳಿ, ಪಿ.ಎಸ್.ಪ್ರೇಮ ಕೊರಟಿಕೆರೆ, ಬಿ.ಟಿ. ನಿಜಲಿಂಗಪ್ಪ ಬೆಣ್ಣೆಹಳ್ಳಿ ಮತ್ತು ಕೆ. ಕೃಷ್ಣ ಜಮ್ಮಾಪುರ ಗೊಲ್ಲರಹಟ್ಟಿ ಇವರು ಸಾಮಾನ್ಯ ಸದಸ್ಯರಾಗಿರುತ್ತಾರೆ.

ಉಪ ವಿಭಾಗಾಧಿಕಾರಿಗಳು ಅಧ್ಯಕ್ಷರಾಗಿ ಮತ್ತು ತಹಶೀಲ್ದಾರ್ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

# ಎಸ್ಸಿ ಮೀಸಲಾತಿಯಲ್ಲಿ ಕೆನೆಪದರ ಇಲ್ಲ

ನವದೆಹಲಿ, ಆ. 9 - ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಕೆನೆಪದರ ಕಲ್ಪಿಸಲು ಬಿ.ಆರ್. ಅಂಬೇಡ್ಕರ್ ರಚಿಸಿರುವ ಸಂವಿಧಾನದಲ್ಲಿ ಯಾವುದೇ ಅವಕಾಶ ಇಲ್ಲ ಎಂದು ಕೇಂದ್ರ ಸಂಪುಟ ಸ್ಪಷ್ಟಪಡಿಸಿದೆ.

ಒಳ ಮೀಸಲಾತಿ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.

ಬಾಬಾ ಸಾಹೇಬ್ ಅಂಬೇಡ್ಕರ್ ನೀಡಿರುವ ಸಂವಿಧಾನ ದಲ್ಲಿರುವ ಅಂಶಗಳಿಗೆ ಎನ್.ಡಿ.ಎ. ಸರ್ಕಾರ ದೃಢವಾಗಿ ಬದ್ಧವಾಗಿದೆ ಎಂಬುದು ಸಂಪುಟ ಸಭೆಯ ನಿಲುವಾಗಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಅಂಬೇಡ್ಕರ್ ನೀಡಿರುವ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಕೆನೆ ಪದರ ಕಲ್ಪಿಸುವ ಅವಕಾಶ ಇಲ್ಲ. ಪರಿಶಿಷ್ಟರ ಮೀಸಲಾತಿಯು ಸಂವಿಧಾನಕ್ಕೆ ಅನುಗುಣವಾಗಿರಬೇಕು ಎಂದು ಸಚಿವ ವೈಷ್ಣವ್ ಹೇಳಿದ್ದಾರೆ.

ಇದೇ ವೇಳೆ, ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ 24,657 ಕೋಟಿ ರೂ.ಗಳ ಅಂದಾಜಿನ 8 ರೈಲ್ವೆ ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ.

ಈ ಯೋಜನೆಗಳು ಒಡಿಶಾ, ಮಹಾರಾಷ್ಟ್ರ, ಆಂಧ್ರಪ್ರದೇಶ, ಜಾರ್ಖಂಡ್, ಬಿಹಾರ, ತೆಲಂಗಾಣ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳಿಗೆ ಸೇರಿದವು. ಒಟ್ಟಾರೆ 900 ಕಿಲೋಮೀಟರ್ ಉದ್ದದ ರೈಲ್ವೆ ಮಾರ್ಗ ನಿರ್ಮಿಸಲಾಗುವುದು. ಸಂಪುಟ ಸಭೆಯಲ್ಲಿ ಸ್ವಚ್ಛ ಸಸಿ ಯೋಜನೆ (ಸಿ.ಪಿ.ಪಿ.)ಗೆ ಒಪ್ಪಿಗೆ ನೀಡಲಾಗಿದೆ. 1,766 ಕೋಟಿ ರೂ.ಗಳ ಯೋಜನೆಯ ಮೂಲಕ ತೋಟಗಾರಿಕೆಗೆ ಉತ್ತಮ ಗುಣಮಟ್ಟದ ಸಸಿಗಳನ್ನು ಒದಗಿಸಲಾಗುವುದು.

## ಪರಿಶಿಷ್ಟರಲ್ಲಿ ಕೆನೆಪದರ ಬೇಡ ಬಿಜೆಪಿ ಸಂಸದರ ಮನವಿ

ನವದೆಹಲಿ, ಆ. 9 - ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಲ್ಲಿ ಕೆನೆ ಪದರ ಗುರುತಿಸಬೇಕು ಎಂದು ಸುಪ್ರೀಂಕೋರ್ಟ್ ಟಿಪ್ಪಣಿ ಮಾಡಿರುವ ಬಗ್ಗೆ ಬಿಜೆಪಿ ಸಂಸದರ ನಿಯೋಗ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಳಿ ಕಳವಳ ವ್ಯಕ್ತಪಡಿಸಿದೆ.

ಆಗಸ್ಟ್ 1ರಂದು ಒಳ ಮೀಸಲಾತಿ ಕುರಿತು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. . ಈ ತೀರ್ಪಿನಲ್ಲಿ ಕೆನೆ ಪದರದ ಕುರಿತು ಪ್ರಸ್ತಾಪಿಸಲಾಗಿತ್ತು.

ಈ ಬಗ್ಗೆ ಮಾತನಾಡಿರುವ ಬಿಜೆಪಿ ಸಂಸದ ಫಗನ್ ಸಿಂಗ್ ಕುಲಾಸ್ತೆ, ಕೆನೆ ಪದರದ ಕುರಿತು ಸುಪ್ರೀಂಕೋರ್ಟ್ ಮಾಡಿರುವ ಟಿಪ್ಪಣಿಯನ್ನು ಜಾರಿಗೆ ತರಬಾರದು ಎಂದು ಹೇಳಿದರು. ಪ್ರಧಾನಮಂತ್ರಿ ಸಹ ಇದೇ ರೀತಿಯ ನಿಲುವು ಹೊಂದಿದ್ದಾರೆ. ಈ ಬಗ್ಗೆ ಪರಿಶೀಲಿಸಲಾಗುವುದು ಚಿಂತೆ ಮಾಡುವುದು ಬೇಡ ಎಂದಿದ್ದಾರೆ ಎಂದು ಕುಲಾಸ್ತೆ ತಿಳಿಸಿದರು.

# ಬುರ್ಖಾ, ಹಿಜಾಬ್ ನಿಷೇಧಕ್ಕೆ ತಡೆ

**ಉಡುಗೆಗೆ ಸ್ವಾತಂತ್ರ್ಯವಿದೆ : ಸುಪ್ರೀಂ ಕೋರ್ಟ್**


ನವದೆಹಲಿ, ಆ. 9 – ಬುರ್ಖಾ, ಹಿಜಾಬ್ ಹಾಗೂ ನಕಾಬ್‌ಗಳನ್ನು ಕಾಲೇಜು ಕ್ಯಾಂಪಸ್‌ನಲ್ಲಿ ನಿಷೇಧಿಸುವ ಮುಂಬೈ ಕಾಲೇಜಿನ ಆದೇಶವನ್ನು ಸುಪ್ರೀಂ ಕೋರ್ಟ್ ತಡೆದಿದೆ. ವಿದ್ಯಾರ್ಥಿನಿಯರು ತಾವು ಬಯಸುವ ಉಡುಗೆಯನ್ನು ತೊಡುವ ಸ್ವಾತಂತ್ರ್ಯ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಶಿಕ್ಷಣ ಸಂಸ್ಥೆಗಳು ತಮ್ಮ ನಿರ್ಧಾರವನ್ನು ವಿದ್ಯಾರ್ಥಿನಿಯರ ಮೇಲೆ ಹೇರುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಸಂಜಯ್ ಕುಮಾರ್ ಅವರನ್ನು ಒಳಗೊಂಡ ಪೀಠ ಹೇಳಿದೆ. ಮುಂಬೈನ ಚೆಂಬೂರ್ ಟ್ರಾಂಬೆ ಶಿಕ್ಷಣ ಸಂಸ್ಥೆಯು ಸಮವಸ್ತ್ರವನ್ನು ಕಡ್ಡಾಯಗೊಳಿಸಿತ್ತು. ಇದರ ಅನ್ವಯ ಸಂಸ್ಥೆಗೆ ಸೇರಿದ ಎನ್.ಜಿ. ಆಚಾರ್ಯ ಹಾಗೂ ಡಿ.ಕೆ. ಮರಾಠೆ ಕಾಲೇಜುಗಳಲ್ಲಿ ವಸ್ತ್ರ ಸಂಹಿತೆ ಜಾರಿಗೆ ತರಲಾಗಿತ್ತು.

(5ನೇ ಪುಟಕ್ಕೆ)

# ಎಸ್ಸಿ-ಎಸ್ಟಿ ಕೆನೆಪದರದವರಿಗೆ ಮೀಸಲಾತಿ ಸುಪ್ರೀಂ ಸಲಹೆ ಮರುಪರಿಶೀಲನೆ ಅಗತ್ಯ

**ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮದಲ್ಲಿ ವೀರಗೋಟ ಕನಕ ಗುರುಪೀಠದ ಶ್ರೀ ಸಿದ್ಧರಾಮಾನಂದ ಸ್ವಾಮೀಜಿ**



ದಾವಣಗೆರೆ, ಆ. 9- ಆದಿವಾಸಿಗಳ ಸಂಸ್ಕೃತಿ ಮಾತೃ ಪ್ರಧಾನ ಸಂಸ್ಕೃತಿಯಾಗಿದ್ದು, ಆದರೆ ಪಿತೃ ಪ್ರಧಾನ ಸಂಸ್ಕೃತಿಯಾಗಿ ವೈಭವೀಕರಿಸಲ್ಪಡುತ್ತಿದೆ ಎಂದು ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು ತಿಂಥಿಣಿ ಬ್ರಿಡ್ಜ್ ವೀರಗೋಟ ಕನಕ ಗುರುಪೀಠದ ಪೀಠಾಧಿಪತಿಗಳಾದ ಶ್ರೀ ಸಿದ್ಧರಾಮಾನಂದ ಮಹಾಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಆರ್‌ಎಂಸಿ ರಸ್ತೆಯ ಬಂಬೂಬಜಾರ್‌ನಲ್ಲಿನ ಶ್ರೀ ಮಲ್ಲಿಕಾರ್ಜುನ ಕಲ್ಯಾಣ ಮಂದಿರದಲ್ಲಿ ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ಬೆಂಗಳೂರು, ಶ್ರೀ ಕಾಗಿನೆಲೆ ಮಹಾಸಂಸ್ಥಾನ, ಕನಕ ಗುರುಪೀಠ ವೀರಗೋಟ, ತಿಂಥಿಣಿ ಬ್ರಿಡ್ಜ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 30 ನೇ ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ವಿಶಿಷ್ಟ ಬದುಕು ಹಾಗೂ ಆಚರಣೆ ಹೊಂದಿರುವ ಆದಿವಾಸಿಗಳು ಭಾರತದ ವೈವಿಧ್ಯತೆಯ ಪ್ರತೀಕವಾಗಿದ್ದು, ಸರ್ಕಾರದಿಂದ ಆದಿವಾಸಿಗಳಿಗೆ ಸಿಗಬೇಕಾದ ಹಕ್ಕುಗಳು ಮತ್ತು ಸೌಲಭ್ಯಗಳು ಸಮರ್ಪಕವಾಗಿ ದೊರಕುತ್ತಿಲ್ಲ. ಸರ್ಕಾರ ಆದಿವಾಸಿಗಳ ಬಗ್ಗೆ ವಿಶೇಷ ಗಮನಹರಿಸಬೇಕೆಂದು ಆಗ್ರಹಪೂರ್ವಕ ಮನವಿ ಮಾಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೆನೆಪದರದವರಿಗೆ ಮೀಸಲಾತಿ ಸೌಲಭ್ಯ ನೀಡಬಾರದು ಎಂದು ಸುಪ್ರಿಂ ಕೋರ್ಟ್ ಸಲಹೆ ನೀಡಿದ್ದು, ಇದರಿಂದ ಅನ್ಯಾಯವಾಗಲಿರುವ ಕಾರಣ ಮರು ಪರಿಶೀಲನೆ ಮಾಡುವುದು ಒಳಿತು ಎಂದರು.

ವಿಧಾನ ಪರಿಷತ್ ಸದಸ್ಯ ಶಾಂತಾರಾಮ್ ಸಿದ್ಧಿ ಮಾತನಾಡಿ, ತೀರಾ ಹಿಂದುಳಿದಿರುವ ಆದಿವಾಸಿ ಸಮುದಾಯವನ್ನು ಸರ್ಕಾರ ಸರಿಯಾದ ರೀತಿಯ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದು ಹೇಳಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಷ್ಠಾನಕ್ಕೆ ತರುವ ಬಹುತೇಕ ಯೋಜನೆಗಳು ಯಶಸ್ವಿಯಾಗಿಲ್ಲ. ಸಮುದಾಯದ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸಮುದಾಯದ ಮುಖಂಡರು ಒಟ್ಟಾಗಿ ಆದಿವಾಸಿಗಳಿಗೆ ಸಿಗಬೇಕಾದ ಹಕ್ಕುಗಳನ್ನು ಕೊಡಿಸುವಲ್ಲಿ ಮುಂದಾಗಬೇಕೆಂದು ಸಲಹೆ ನೀಡಿದರು.

ಹುಲಿ ಸಂರಕ್ಷಿತ ಅರಣ್ಯ ಸೇರಿದಂತೆ ನಾನಾ ಯೋಜನೆಗಳಿಗಾಗಿ ಆದಿವಾಸಿಗಳನ್ನು ಕಾಡಿನಿಂದ ಒಕ್ಕಲೆಬ್ಬಿಸುವ ಸರ್ಕಾರ, ಪುನರ್ವಸತಿ ಕೇಂದ್ರಕ್ಕೆ ಕಳುಹಿಸುತ್ತದೆ.

ಆದರೀಗ ಎತ್ತಂಗಡಿಯಾದ ಜನರ ಭೂಮಿ, ಕುಡಿಯುವ ನೀರಿನ ಸಮಸ್ಯೆ ಇದುವರೆಗೂ ಬಗೆಹರಿದಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಹರಿಹರ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಕೇಂದ್ರ ಸರ್ಕಾರ ಆದಿವಾಸಿ ಸಮುದಾಯದ ಅಭಿವೃದ್ಧಿಗಾಗಿ 24 ಸಾವಿರ ಕೋಟಿ ರೂ.ಗಳನ್ನು ಮೀಸಲಿರಿಸಿದೆ. ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆಯಾದ ತಕ್ಷಣ ಹರಿಹರ ತಾಲ್ಲೂಕು ರಾಜಗೊಂಡ ಆದಿವಾಸಿಗಳಿಗೆ ಸೂರು ಕಲ್ಪಿಸುವ ಕಾರ್ಯ ಮಾಡಲಾಗುವುದು ಎಂದು ಹೇಳಿದರು.

ಇದೇ ವೇಳೆ ಆದಿವಾಸಿ ಸಮುದಾಯದ ಪಿಹೆಚ್‌ಡಿ ಪದವಿ ಪಡೆದ 24 ಜನರಿಗೆ 'ಆದಿವಾಸಿ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಂಪಿ ಕನ್ನಡ ವಿವಿಯ ಬುಡುಕಟ್ಟು ಅಧ್ಯಯನ ವಿಭಾಗದ ನಿವೃತ್ತ ಮುಖ್ಯಸ್ಥ ಡಾ. ಕೆ.ಎಂ. ಮೇತ್ರಿ ಅವರನ್ನು ಗೌರವಿಸಲಾಯಿತು.

ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್‌ನ ಎಂ. ಕೃಷ್ಣಯ್ಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೇಶ್, ಮುಖಂಡರಾದ ಜಯಣ್ಣ, ಮೇದಾರ ಎಂ. ಚಂದ್ರಶೇಖರ್, ಜಿಲ್ಲಾಧ್ಯಕ್ಷ ರವಿಕುಮಾರ್ ಎಂ. ಮೇದಾರ್, ಕಾನೂನು ಸಲಹೆಗಾರ ಕೆ.ಎಸ್. ಮಧುಕುಮಾರ್, ಕುಮುದಾ, ಸೋಮಶೇಖರ್, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಅಧಿಕಾರಿ ನವೀನ್ ಮಠದ್ ಮತ್ತಿತರರು ಉಪಸ್ಥಿತರಿದ್ದರು.

# ಸುತ್ತೂರಿನಲ್ಲಿ 'ಎಸ್ಸೆಸ್ ಅತಿಥಿ ಗೃಹ' ಉದ್ಘಾಟನೆ



ದಾವಣಗೆರೆ, ಆ.9- ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ ಶ್ರೀಕ್ಷೇತ್ರ ಸುತ್ತೂರು ಮೈಸೂರು ಜಿಲ್ಲೆ ಇಲ್ಲಿ ಶಾಸಕರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ನಿರ್ಮಿಸಿರುವ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಅತಿಥಿ ಗೃಹವನ್ನು ಇಂದು ಲೋಕಾರ್ಪಣೆಗೊಳಿಸಲಾಯಿತು. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶೀ ಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಶಿವಶಂಕರಪ್ಪನವರು ಅತಿಥಿ ಗೃಹವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ತೋಟಗಾರಿಕೆ ಮತ್ತು ಗಣಿ ಹಾಗೂ ಭೂ ವಿಜ್ಞಾನ ಇಲಾಖೆ ಸಚಿವ ಎಸ್ .ಎಸ್. ಮಲ್ಲಿಕಾರ್ಜುನ್, ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಮಠದ ಆಡಳಿತ ಅಧಿಕಾರಿ ಸಿ.ಜಿ.ಬೆಟಸೂರಮಠ, ಬೆಂಗಳೂರು ಮಾಜಿ ಮೇಯರ್ ಪುಟ್ಟರಾಜು, ಉದ್ಯಮಿ ಇಂದೂಧರ್, ವರುಣ ಮಹೇಶ್, ಸುನಂದ ಗಿರೀಶ್ ಮತ್ತಿತರರು ಇದ್ದರು.

# ನೀಟ್-ಪಿಜಿ ಪರೀಕ್ಷೆ ಮುಂದೂಡಿಕೆಗೆ ನಕಾರ

ನವದೆಹಲಿ, ಆ. 9 – ಸ್ನಾತಕೋತ್ತರ ವೈದ್ಯಕೀಯ ಪ್ರವೇಶಕ್ಕೆ ನಡೆಸಲಾಗುವ ನೀಟ್ - ಪಿಜಿ ಪರೀಕ್ಷೆ ಮುಂದೂಡಬೇಕು ಎಂಬ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಆಗಸ್ಟ್ 11ರಂದು ಪರೀಕ್ಷೆಗಳು ನಡೆಯಬೇಕಿದೆ.

ವಿದ್ಯಾರ್ಥಿಗಳಿಗೆ ತೊಂದರೆಯಾಗುವ ರೀತಿಯಲ್ಲಿ ಕೇಂದ್ರಗಳನ್ನು ನೀಡಲಾಗಿದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಆದರೆ ಐವರು ವಿದ್ಯಾರ್ಥಿಗಳಿಗಾಗಿ 2 ಲಕ್ಷ ವಿದ್ಯಾರ್ಥಿಗಳ ಭವಿಷ್ಯವನ್ನು ಅತಂತ್ರಗೊಳಿಸಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅರ್ಜಿದಾರರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಸಂಜಯ್ ಹೆಗಡೆ, ಜುಲೈ 31ರಂದು ಪರೀಕ್ಷೆ ಬರೆಯಬೇಕಾದ ನಗರಗಳನ್ನು ಪ್ರಕಟಿಸಲಾಗಿದೆ. ಆಗಸ್ಟ್ 8ರಂದು ನಿರ್ದಿಷ್ಟ ಕೇಂದ್ರ ಗಳನ್ನು ತಿಳಿಸುವುದಾಗಿ ಹೇಳಲಾಗಿದೆ. ಹೀಗಾಗಿ ಪರೀಕ್ಷೆ ಮುಂದೂಡಬೇಕು ಎಂದು ಮನವಿ ಮಾಡಿಕೊಂಡಿದ್ದರು.

# ಹೆಚ್ಡಿಕೆ ವಿರುದ್ಧ 50 ಡಿ-ನೋಟಿಫಿಕೇಶನ್ ಪ್ರಕರಣ

ಬೆಂಗಳೂರು, ಆ. 9 - ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಬಹಳ ಕ್ಲೀನ್ ಸ್ವಾಮಿಯಂತೆ. ನನಗೆ ಅವರ ವಿಚಾರ ಗೊತ್ತಿರಲಿಲ್ಲ. ಅವರ ವಿರುದ್ಧ ಸುಮಾರು 50 ಡಿ-ನೋಟಿಫಿಕೇಶನ್ ಪ್ರಕರಣಗಳಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎಲ್ಲವನ್ನು ಹೊರಗೆ ತರುತ್ತೇನೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಕುಮಾರಸ್ವಾಮಿ ಅವರ ಪ್ರಕರಣದಲ್ಲಿ ವಿಚಾರಣೆ ನಡೆಸಲು ಲೋಕಾಯುಕ್ತ ರಾಜ್ಯಪಾಲರಿಗೂ ಪತ್ರ ಬರೆದಿದ್ದಾರೆ. ಆದರೆ ಕುಮಾರಸ್ವಾಮಿ ಯೂಟರ್ನ್ ಮಾಡಿಕೊಂಡು ಬಿಜೆಪಿ ಮೊರೆ ಹೋಗಿದ್ದಾರೆ ಎಂದರು.

ವಿಜಯೇಂದ್ರ, ನಿಮ್ಮ ತಂದೆ ಎರಡು ಸಾರಿ ರಾಜೀನಾಮೆ ಕೊಟ್ಟಿದ್ದೇಕೆ ಲೆಕ್ಕ ಕೊಡಬೇಕು. ನಾಳೆ ನೀನು ಮೈಸೂರಿಗೆ ಬಂದು ಸಭೆ ಮಾಡುವಾಗ ಲಕ್ಷ್ಮಿ ವಿಲಾಸ್ ಬ್ಯಾಂಕ್‌ನಿಂದ ವಿದೇಶಕ್ಕೆ ಆರ್‌ಟಿಜಿಎಸ್ ಮಾಡಿರುವುದು ಏಕೆ ಎಂಬುದನ್ನು ತಿಳಿಸಬೇಕು. ನಿಮ್ಮ ತಂದೆ ಕಣ್ಣೀರು ಹಾಕಿದ್ದು ಏಕೆ ಎಂದು ವಿವರಿಸಬೇಕು. ಇಲ್ಲಿ ಯಾರು ರಾಜೀನಾಮೆ ನೀಡಬೇಕು ಎಂದು ಕಾಲ ತೀರ್ಮಾನ ಮಾಡುತ್ತದೆ ಎಂದರು.

## ಕಿತ್ತೂರು ಕೆ.ಇ. ಗಂಗಾಧರ ನಿಧನ



ದಾವಣಗೆರೆ ತಾಲ್ಲೂಕು ಕಿತ್ತೂರು ಗ್ರಾಮದ ದಿ. ದೊಗ್ಗಳ್ಳಿ ಈಶಪ್ಪನವರ ಪುತ್ರ ಶ್ರೀ ಕೆ.ಇ. ಗಂಗಾಧರ ಅವರು ದಿನಾಂಕ 09.08.2024ರ ಶುಕ್ರವಾರ ರಾತ್ರಿ 8.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 48 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಸಹೋದರಿಯರು, ಮಾವಂದಿರು-ಅಳಿಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.08.2024ರ ಶನಿವಾರ ಸಂಜೆ 4 ಗಂಟೆಗೆ ಸ್ವಗ್ರಾಮ ಕಿತ್ತೂರಿನ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ. 89701 23232




50ನೇ ಜನ್ಮ ದಿನದ ಶುಭಾಶಯಗಳು

ಹಸನ್ಮುಖಿ, ಸದಾಸುಖಿ, ವೃತ್ತಿಯಲ್ಲಿ ಬೆಳ್ಳಿ-ಬಂಗಾರಗಳ ಸಹವಾಸ. ಪ್ರವೃತ್ತಿಯಲ್ಲಿ ವಜ್ರ-ವೈಢೂರ್ಯಗಳಂತಹ ಕಾರ್ಯಕ್ರಮ ಆಯೋಜನೆಯ ಹವ್ಯಾಸ, ಪ್ರೀತಿ, ಆತ್ಮೀಯತೆ, ಆತಿಥ್ಯದ ಸಾರಥಿ... ಮುಗುಳು ನಗೆಯಲ್ಲೇ ಸ್ನೇಹದ ಕಂಪು ಸೂಸುವ ಸ್ನೇಹ ಜೀವಿ... 47 ಸಂಘ- ಸಂಸ್ಥೆಗಳಲ್ಲಿ ಸಹಭಾಗಿಯಾದ ಸಂಘಟನಾ ಚತುರ... 52ನೇ ಬಾರಿ ರಕ್ತ ದಾನವಿತ್ತ ಜೀವನ್ಮುಖಿ... ಇವರಿಗನುದಿನ ಬೇಕು ಯೋಗಾಸನದ ಒಕ್ಕೂಟ, ಸೇವೆಯಲ್ಲಿ ಇವರು ಸದಾ ಮುಂದು, ಜನರಲ್ಲಿ ಬೆರೆಯುವ ಇವರಿಗೆ ಎಲ್ಲರೂ ಬಂಧು, ಕಾಮಾಕ್ಷಿ ಕುಲಪುರುಷ ದೇವಸ್ಥಾನಕ್ಕೆ ವರದು ಕೊಡುಗೈ, ಸಮಷ್ಟಿ ಹಿತದ ಕೆಲಸಗಳಿಗೆ ಇವರು ಬಲಗೈ, ಜಿಲ್ಲಾಡಳಿತದಿಂದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ, ಶ್ರಾವಣ ಪುಣ್ಯ ಮಾಸದಲ್ಲಿ ಜನ್ಮವೆತ್ತ ನಗುಮೊಗದ ಸ್ನೇಹಜೀವಿ, ಸಂಘಟನಾ ಚಾಣಕ್ಯ, ವಿಶಾಲ ಹೃದಯಿ

ಶ್ರೀ ವಾಸುದೇವ ರಾಯ್ಕರ್ ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

ಲಯನ್ಸ್ ಜಿಲ್ಲೆ 317-ಸಿ ಕೋರ್ ಕಮಿಟಿಯ ಛೇರ್ಮನ್, ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟ, ಸಿನಿಮಾ ಸಿರಿ, ಕರ್ನಾಟಕ ರಕ್ಷಣಾ ವೇದಿಕೆ, ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ, ಆರ್ಟ್ ಆಫ್ ಲಿವಿಂಗ್ ಮುಂತಾದ ಸಂಘ-ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿರುವ ನಮ್ಮೆಲ್ಲರ ಸನ್ಮಿತ್ರ ರಾಯ್ಕರ್ ಅವರಿಗೆ ಭಗವಂತನು ಆಯುರಾರೋಗ್ಯ, ಐಶ್ವರ್ಯ ಕೊಡಲೆಂದು ಹಾರೈಸುವ...

ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟ (ರಿ.), ದಾವಣಗೆರೆ.




ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ಸಿಲ್ವರ್ ಜ್ಯುಬಿಲಿ ಟವರ್, ವಸಂತ ರಸ್ತೆ, ದಾವಣಗೆರೆ. ☎ : 08192-233754

27ನೇ ವಾರ್ಷಿಕ ಮಹಾಸಭೆಯ ನೋಟೀಸು

ಸನ್ಮಾನ್ಯ ಸಂಘದ ಸದಸ್ಯರುಗಳೇ, ದಿನಾಂಕ 10.08.2024ರ ಶನಿವಾರದಂದು ದಾವಣಗೆರೆ ವಿನೋಬನಗರ 1ನೇ ಮುಖ್ಯರಸ್ತೆಯಲ್ಲಿರುವ ಶ್ರೀಮತಿ ಗೌರಮ್ಮ ನರಹರಿ ಶೇಟ್ ಸಭಾಭವನದಲ್ಲಿ ಬೆಳಿಗ್ಗೆ 11.00 ಗಂಟೆಗೆ ನಮ್ಮ ಸಂಘದ 27ನೇ ವಾರ್ಷಿಕ ಮಹಾಸಭೆ ನಡೆಯಲಿದೆ ಮತ್ತು ಸಂಜೆ 4 ಗಂಟೆಗೆ ದೈವಜ್ಞ ಸಮಾಜದ 62ನೇ ಸರ್ವ ಸದಸ್ಯರ ಮಹಾಸಭೆ ಏರ್ಪಡಿಸಿದ್ದು, ನಂತರ 6.30 ಕ್ಕೆ ಪ್ರತಿಭಾ ಪುರಸ್ಕಾರ ಹಾಗೂ ನೋಟ್ ಬುಕ್ ವಿತರಣಾ ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷರಾದ ಶ್ರೀ ಪ್ರಶಾಂತ ವಿ. ವೆರ್ಣೇಕರ್ (ಹೆಗಡೆ) ಇವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ. ತಾವೆಲ್ಲರೂ ಸರಿಯಾದ ಸಮಯಕ್ಕೆ ಆಗಮಿಸಲು ವಿನಂತಿ.

ಪ್ರಶಾಂತ ವಿ. ವೆರ್ಣೇಕರ್ (ಹೆಗಡೆ) ಅಧ್ಯಕ್ಷರು




ರಾಜೀವ್ ವಿ. ವೆರ್ಣೇಕರ್ (ಪಿ.ಬಿ.ಎ.) ಉಪಾಧ್ಯಕ್ಷರು


ಮಂಜುನಾಥ ವಿ. ಕುಡತರ್‌ಕರ್ (ಗಾಲಿ) ನಿರ್ದೇಶಕರು


ಚಂದ್ರಹಾಸ ಕುರ್ಡೇಕರ್ ನಿರ್ದೇಶಕರು


ಸತೀಶ್ ಎಸ್. ಸಾನು ನಿರ್ದೇಶಕರು


ವಾಸುದೇವ ರಾಯ್ಕರ್ ನಿರ್ದೇಶಕರು


ರಾಘವೇಂದ್ರ ಎನ್. ದಿವಾಕರ್ ನಿರ್ದೇಶಕರು


ದೀಪಕ್ ಎನ್. ಶೇಟ್ ನಿರ್ದೇಶಕರು


ರಾಘವೇಂದ್ರ ಕುರ್ಡೇಕರ್ ನಿರ್ದೇಶಕರು


ವಿಜಯ ಎಸ್. ವಿಠ್ಠಲಕರ್ ನಿರ್ದೇಶಕರು


ಶ್ವೇತ ಜಿ. ಶೇಟ್ ನಿರ್ದೇಶಕರು


ನಾರಾಯಣ ಎಂ. ರಾಯ್ಕರ್ ನಾಮನಿರ್ದೇಶಿತ ನಿರ್ದೇಶಕರು (ಹೊನ್ನಾಳಿ)


ಶ್ರೀಕಾಂತ್ ಕುರ್ಡೇಕರ್ ನಾಮನಿರ್ದೇಶಿತ ನಿರ್ದೇಶಕರು (ಹೊನ್ನಾಳಿ)


ರಾಘವೇಂದ್ರ ಡಿ. ರೇವಣಕರ್ ನಾಮನಿರ್ದೇಶಿತ ನಿರ್ದೇಶಕರು


ಡಿ.ಎ. ವಿಶ್ವನಾಥ್ ನಾಮನಿರ್ದೇಶಿತ ನಿರ್ದೇಶಕರು


ಸುವರ್ಣ ಎಂ. ಕುರ್ಡೇಕರ್ ವ್ಯವಸ್ಥಾಪಕರು

ವಿ.ಸೂ.: ನಮ್ಮ ಸಹಕಾರಿಯ ಎಲ್ಲಾ ಸದಸ್ಯರುಗಳಿಗೆ ಈಗಾಗಲೇ ಮಹಾಸಭೆಯ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದೆ. ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಚಾಮರಾಜನಗರ ಜಿಲ್ಲೆ.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

## ಮಾಜಿ ರಾಜ್ಯಪಾಲರಾದ

# ದಿ॥ ಬಿ. ರಾಚಯ್ಯ ರವರ

# ಸ್ಮಾರಕ ಉದ್ಘಾಟನೆ ಸಮಾರಂಭ

ದಿನಾಂಕ: 10.08.2024 ಸಮಯ: ಬೆಳಗ್ಗೆ 11.00 ಗಂಟೆಗೆ

ಸ್ಥಳ: ಬಿ.ರಾಚಯ್ಯರವರ ಸ್ಮಾರಕ, ಆಲೂರು ಗ್ರಾಮ, ಸಂದಕವಾಡಿ ಹೋಬಳಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.




**ಸ್ಮಾರಕ ಉದ್ಘಾಟನೆ**
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

**ಜ್ಯೋತಿ ಬೆಳಗಿಸುವವರು**
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

**ಬಿ. ರಾಚಯ್ಯ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ**
ಶ್ರೀ ಕೆ. ವೆಂಕಟೇಶ್
ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು ಹಾಗೂ
ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು

**ಬಿ. ರಾಚಯ್ಯ ಲೈಫ್ ಆ್ಯಂಡ್ ಪಾಲಿಟಿಕ್ಸ್ ಪುಸ್ತಕ ಬಿಡುಗಡೆ**
ಡಾ. ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು,
ಕರ್ನಾಟಕ ಸರ್ಕಾರ

**ಘನ ಉಪಸ್ಥಿತಿ**
ಡಾ. ಹೆಚ್.ಕೆ. ಪಾಟೀಲ್
ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ
ಪ್ರವಾಸೋದ್ಯಮ ಸಚಿವರು, ಕರ್ನಾಟಕ ಸರ್ಕಾರ

**ಅಧ್ಯಕ್ಷತೆ**
ಶ್ರೀ ಸಿ. ಪುಟ್ಟರಂಗಶೆಟ್ಟಿ
ಮಾನ್ಯ ಅಧ್ಯಕ್ಷರು, ಎಂ.ಎಸ್.ಐ.ಎಲ್., ಹಾಗೂ
ಶಾಸಕರು, ಚಾಮರಾಜನಗರ ವಿಧಾನ ಸಭಾ ಕ್ಷೇತ್ರ

**ಗೌರವ ಸಮರ್ಪಣೆ**
ಶ್ರೀಮತಿ ಗೌರಮ್ಮ ಬಿ. ರಾಚಯ್ಯ
ಮಾಜಿ ರಾಜ್ಯಪಾಲರಾದ
ದಿ॥ ಬಿ. ರಾಚಯ್ಯನವರ ಧರ್ಮಪತ್ನಿ

## ಸಮಾರಂಭದ ಮುಖ್ಯ ಅತಿಥಿಗಳು

ಶ್ರೀ ಸುನಿಲ್ ಬೋಸ್
ಮಾನ್ಯ ಸಂಸತ್ ಸದಸ್ಯರು,
ಚಾಮರಾಜನಗರ ಲೋಕಸಭಾ ಕ್ಷೇತ್ರ

ಶ್ರೀ ಎ.ಆರ್. ಕೃಷ್ಣಮೂರ್ತಿ
ಮಾನ್ಯ ಶಾಸಕರು,
ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರ

ಶ್ರೀ ಹೆಚ್.ಎಂ. ಗಣೇಶ್ ಪ್ರಸಾದ್
ಮಾನ್ಯ ಶಾಸಕರು,
ಗುಂಡ್ಲುಪೇಟೆ ವಿಧಾನ ಸಭಾ ಕ್ಷೇತ್ರ

ಶ್ರೀ ಎಂ.ಆರ್. ಮಂಜುನಾಥ್
ಮಾನ್ಯ ಶಾಸಕರು,
ಹನೂರು ವಿಧಾನ ಸಭಾ ಕ್ಷೇತ್ರ

ಶ್ರೀ ದರ್ಶನ್ ಧ್ರುವ ನಾರಾಯಣ್
ಮಾನ್ಯ ಶಾಸಕರು,
ನಂಜನಗೂಡು ವಿಧಾನ ಸಭಾ ಕ್ಷೇತ್ರ

ಶ್ರೀ ಅನಿಲ್ ಚಿಕ್ಕಮಾದು
ಮಾನ್ಯ ಶಾಸಕರು,
ಹೆಚ್.ಡಿ.ಕೋಟೆ ವಿಧಾನ ಸಭಾ ಕ್ಷೇತ್ರ

ಡಾ. ಯತೀಂದ್ರ ಸಿದ್ದರಾಮಯ್ಯ
ಮಾನ್ಯ ಶಾಸಕರು,
ವಿಧಾನ ಪರಿಷತ್

ಡಾ. ಡಿ. ತಿಮ್ಮಯ್ಯ
ಮಾನ್ಯ ಶಾಸಕರು,
ವಿಧಾನ ಪರಿಷತ್

ಶ್ರೀ ಮಧು ಜಿ. ಮಾದೇಗೌಡ
ಮಾನ್ಯ ಶಾಸಕರು,
ವಿಧಾನ ಪರಿಷತ್

ಶ್ರೀ ಸಿ.ಎನ್. ಮಂಜೇಗೌಡ
ಮಾನ್ಯ ಶಾಸಕರು,
ವಿಧಾನ ಪರಿಷತ್

ಶ್ರೀ ಕೆ. ವಿವೇಕಾನಂದ
ಮಾನ್ಯ ಶಾಸಕರು,
ವಿಧಾನ ಪರಿಷತ್

ಶ್ರೀ ಜಯಣ್ಣ ಎಸ್
ಮಾನ್ಯ ಅಧ್ಯಕ್ಷರು,
ಕರ್ನಾಟಕ ರಾಜ್ಯ ಉಗ್ರಾಣ ನಿಗಮ

ಶ್ರೀ ಹೆಚ್.ವಿ. ಚಂದ್ರು
ಮಾನ್ಯ ಅಧ್ಯಕ್ಷರು, ಜಿಲ್ಲಾ ಗ್ಯಾರಂಟಿ
ಯೋಜನೆಗಳ ಅನುಷ್ಠಾನ ಪ್ರಾಧಿಕಾರ

ಶ್ರೀ ಪಿ. ಮರಿಸ್ವಾಮಿ
ಮಾನ್ಯ ಅಧ್ಯಕ್ಷರು, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ,
ಕಾವೇರಿ ಜಲಾನಯನ ಯೋಜನೆ, ಮೈಸೂರು

ಶ್ರೀಮತಿ ದುಂಡಮ್ಮ
ಮಾನ್ಯ ಅಧ್ಯಕ್ಷರು,
ಆಲೂರು ಗ್ರಾಮ ಪಂಚಾಯಿತಿ.

## ಸನ್ಮಾನಿತರು

ಸ್ಮಾರಕ ವಿನ್ಯಾಸಕರು
ಶ್ರೀ ಕಿಶೋರ್‌ಚಂದ್ರ

ದಿ॥ ಬಿ. ರಾಚಯ್ಯ ಅವರ ಜೀವನ ಮತ್ತು ರಾಜನೀತಿ ಪುಸ್ತಕದ ಲೇಖಕರು
ಡಾ. ಎಂ. ನಂಜಯ್ಯ ಹೊಂಗನೂರು

ಅನುವಾದಕರು
ಡಾ. ಸಿ. ನಾಗಣ್ಣ ಮತ್ತು ಶ್ರೀ ಬಿ.ವಿ. ಶ್ರೀಧರ

## ಸರ್ವರಿಗೂ ಆತ್ಮೀಯ ಸ್ವಾಗತ

ಮೇಜರ್ ಮಣಿವಣ್ಣನ್. ಪಿ. ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಇಲಾಖೆ ಹಾಗೂ
ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ಡಾ. ರಾಕೇಶ್ ಕುಮಾರ್. ಕೆ. ಭಾ.ಆ.ಸೇ.
ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ,
ಕರ್ನಾಟಕ ಸರ್ಕಾರ

ಶಿಲ್ಪಾ ನಾಗ್. ಭಾ.ಆ.ಸೇ.
ಜಿಲ್ಲಾಧಿಕಾರಿಗಳು,
ಚಾಮರಾಜನಗರ ಜಿಲ್ಲೆ,
ಚಾಮರಾಜನಗರ

ಡಾ. ಕವಿತಾ. ಬಿ.ಟಿ. ಭಾ.ಪೊ.ಸೇ.
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು,
ಚಾಮರಾಜನಗರ ಜಿಲ್ಲೆ.

ಮೋನಾ ರೋತ್, ಭಾ.ಆ.ಸೇ.
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ್, ಚಾಮರಾಜನಗರ ಜಿಲ್ಲೆ.

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

ಕರ್ನಾಟಕ ವಾರ್ತೆ

## ಹರಪನಹಳ್ಳಿ: ನ್ಯೂ ಜನತಾ ಸೌಹಾರ್ದ ಪತ್ತಿನ ಸಹಕಾರ ಸಂಘದ ಉದ್ಘಾಟನೆ



ಹರಪನಹಳ್ಳಿ, ಆ. 9- ಪಟ್ಟಣದ ಪಶು ಆಸ್ಪತ್ರೆಯ ಹಿಂಭಾಗದಲ್ಲಿರುವ ನ್ಯೂ ಜನತಾ ಸೌಹಾರ್ದ ಪತ್ತಿನ ಸಹಕಾರ ಸಂಘವನ್ನು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಉದ್ಘಾಟಿಸಿದರು. ಮಾಜಿ ಸಂಸದ ಕೆ.ಸಿ.ಕೊಂಡಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ, ತಾಲ್ಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕಂಚಿಕೇರಿ ಪಿ.ಜಯಲಕ್ಷ್ಮಿ, ಸಹಕಾರಿ ಧುರೀಣ ಜಿ. ನಂಜನಗೌಡ್ರು, ಅಂಜುಮನ್ ಕಮಿಟಿ ಮಾಜಿ ಅಧ್ಯಕ್ಷ ಸಿ. ಜಾವೀದ್, ಮುಖಂಡರಾದ ಎಂ.ಪಿ ನಾಯ್ಕ್, ಡಿ.ಅಬ್ದುಲ್ ರೆಹಿಮಾನ್, ದಂಡಿನ ಹರೀಶ್, ಗುಂಡಗತ್ತಿ ಕೊಟ್ರಪ್ಪ, ಟಿಹೆಚ್ಎಂ ಮಂಜುನಾಥ್, ಲಾಟಿ ದಾದಾಪೀರ್, ಪೈಲ್ವಾನ್ ಗಣೇಶ್, ದುಗ್ಗಾವತಿ ಹೆಚ್.ಮಂಜುನಾಥ್, ಉಮಾ ಮಹೇಶ್ವರಿ, ಕವಿತಾ ಸುರೇಶ್, ಬಿ.ವೈ ಹರೀಶ್ ಧನಂಜಯ, ಶೇಕ್‌ಷಾವಲಿ, ಎಲ್.ಎಮ್ ನಾಯ್ಕ್, ಮುನ್ನಾಬಾಯಿ ಸೇರಿದಂತೆ, ಇತರರು ಉಪಸ್ಥಿತರಿದ್ದರು.

## ನಗರದಲ್ಲಿಂದು ರಸ ಪ್ರಶ್ನೆ ಕಾರ್ಯಕ್ರಮ

ಭಾರತ ವಿಕಾಸ್ ಪರಿಷತ್ ಗೌತಮ ಶಾಖೆ ವತಿಯಿಂದ ಜಿಲ್ಲಾ ಮಟ್ಟದ 'ಭಾರತ್ ಕೋ ಜಾನೋ' ರಸ ಪ್ರಶ್ನೆ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30ಕ್ಕೆ ಮೋತಿ ವೀರಪ್ಪ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಸ್ಪರ್ಧೆಯು ಗೌತಮ ಶಾಖೆಯ ಜ್ಞಾನ ಹಾಗೂ ವ್ಯಕ್ತಿತ್ವ ವಿಕಸನದ ಮುಖ್ಯ ಸಂಚಾಲಕ ಡಾ. ಬಿ.ಟಿ. ಅಚ್ಯುತ್ ನೇತೃತ್ವದಲ್ಲಿ ನಡೆಯಲಿದೆ ಎಂದು ಗೌತಮ ಶಾಖಾ ಅಧ್ಯಕ್ಷ ಅಜ್ಜಂಪುರ ಶೆಟ್ರು ವಿಜಯ ಕುಮಾರ್ ತಿಳಿಸಿದ್ದಾರೆ.

# ಷಡ್ಯಂತ್ರಕ್ಕೆ ಬಲಿಯಾಗಿ ಮನೆಯಲ್ಲಿ ಕೂರುವುದಿಲ್ಲ

## ಬೃಹತ್ ಜನಾಂದೋಲನ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗು



ಬೆಂಗಳೂರು, ಆ. 9 - ಬಿಜೆಪಿ-ಜೆಡಿಎಸ್ ಎಷ್ಟೇ ಕಪಟ ಉದ್ದೇಶದ ಪಾದಯಾತ್ರೆ ನಡೆಸಿದರೂ, ರಾಜಭವನ ಮತ್ತು ಕೇಂದ್ರ ಸರ್ಕಾರ ಎಷ್ಟೇ ಷಡ್ಯಂತ್ರ ನಡೆಸಿದರೂ ನಾನು ಹೆದರುವುದಿಲ್ಲ, ಇವರ ಷಡ್ಯಂತ್ರಕ್ಕೆ ಬಲಿಯಾಗಿ ಮನೆಯಲ್ಲಿ ಕೂರುವವನಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗಿದ್ದಾರೆ.

ಕೇಂದ್ರ ಸರ್ಕಾರದ ದ್ವೇಷ ರಾಜಕಾರಣ, ಚುನಾಯಿತ ಸರ್ಕಾರಗಳನ್ನು ಉರುಳಿಸುವ ಬಿಜೆಪಿ, ಜೆಡಿಎಸ್‌ನ ಜನತಂತ್ರ ವಿರೋಧಿ ಸರ್ವಾಧಿಕಾರಿ ದುರಾಡಳಿತವನ್ನು ವಿರೋಧಿಸಿ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಬೃಹತ್ ಜನಾಂದೋಲನ ಸಮಾವೇಶದಲ್ಲಿ ಮಾತನಾಡಿದ ಅವರು ಶೋಷಿತರು, ಶ್ರಮಿಕರು, ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಪರವಾಗಿದ್ದೇನೆ, ಇವರ ಪರವಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತೇನೆ ಎಂಬ ಕಾರಣಕ್ಕೆ ನನ್ನನ್ನು ಅಧಿಕಾರದಿಂದ ಕೆಳಗಿಳಿಸುವ ಹುನ್ನಾರ ನಡೆಯುತ್ತಿದೆ ಎಂದರು.

ದೇವರಾಜ ಅರಸು, ಬಂಗಾರಪ್ಪ ಅವರನ್ನೂ ಇವರು ಸಹಿಸಲಿಲ್ಲ, ಈಗ ನನ್ನನ್ನೂ ಸಹಿಸುತ್ತಿಲ್ಲ. ಬಿಜೆಪಿ-ಜೆಡಿಎಸ್ ಒಟ್ಟಾಗಿ ಎಷ್ಟೇ ಪಾದಯಾತ್ರೆ ನಡೆಸಿದರೂ ನಾನು ಜಗ್ಗಲ್ಲ, ಬಗ್ಗಲ್ಲ, ಹಿಂದುಳಿದ ವರ್ಗಗಳಲ್ಲಿ ದೇವರಾಜ ಅರಸು ಬಿಟ್ಟರೆ ಮುಖ್ಯಮಂತ್ರಿಯಾಗಿ ಪೂರ್ಣಾವಧಿ ಮುಗಿಸಿದ್ದು ನಾನು ಮಾತ್ರ, ಇದನ್ನು ಅವರು ಸಹಿಸುತ್ತಿಲ್ಲ.

ವಾಲ್ಮೀಕಿ ನಿಗಮದ ಪ್ರಕರಣದಲ್ಲೂ ಸರ್ಕಾರದ ಮೇಲೆ ಸುಳ್ಳು ಆರೋಪ ಹೊರಿಸಲು ಯತ್ನಿಸಿ ಸೋತರು, ದಾಖಲೆಗಳು ಸ್ಪಷ್ಟವಾಗಿವೆ, ಸರ್ಕಾರಕ್ಕೂ, ನಿಗಮದ ಹಗರಣಕ್ಕೂ ಸಂಬಂಧ ಇಲ್ಲ ಎನ್ನುವುದು ದಾಖಲೆಗಳಲ್ಲಿದೆ ಎಂದರು.

ವಾಲ್ಮೀಕಿ ನಿಗಮದ ಹಗರಣ ಹೊರಗೆ ಬಂದ ತಕ್ಷಣ ನಾವು ಎಸ್‌ಐಟಿ ರಚಿಸಿದೆವು. ತನಿಖೆ ನಡೆದು ಹಣ ವಾಪಾಸ್ ವಸೂಲಾಗಿದೆ. 50 ಕೋಟಿ ರೂ.ಗಳನ್ನು ಎಸ್‌ಐಟಿ ರಿಕವರಿ ಮಾಡಿದೆ, 46 ಕೋಟಿ ರೂ. ಖಾಸಗಿ ಬ್ಯಾಂಕ್‌ನಲ್ಲಿದ್ದು ಫ್ರೀಜ್ ಮಾಡಲಾಗಿದೆ. ಪರಿಣಾಮಕಾರಿಯಾಗಿ ಎಸ್‌ಐಟಿ ತನಿಖೆ ನಡೆಸುತ್ತಿದೆ. ಆದರೂ, ಜಾರಿ ನಿರ್ದೇಶನಾಲಯ (ಇ.ಡಿ) ಸ್ವಯಂ ಸ್ಫೂರ್ತಿಯಿಂದ ಕೇಸು ದಾಖಲಿಸಿಕೊಂಡು ತನಿಖೆ ನಡೆಸಿದರೂ ರಾಜ್ಯ ಸರ್ಕಾರದ ವಿರುದ್ಧ ಏನೂ ದಾಖಲೆ ಸಂಗ್ರಹಿಸಲು ಆಗಲಿಲ್ಲ. ಆದ್ದರಿಂದ ಹಗರಣವೇ ಅಲ್ಲದ ಮುಡಾ ಪ್ರಕರಣಕ್ಕೆ ಹಗರಣದ ಬಣ್ಣ ಕೊಟ್ಟರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ನನ್ನದೊಂದು ಪತ್ರ ಇಲ್ಲ, ನನ್ನದೊಂದು ಸಹಿ ಇಲ್ಲ, ಆಗ ನಮ್ಮ ಸರ್ಕಾರ ಅಧಿಕಾರದಲ್ಲೂ ಇರಲಿಲ್ಲ. ಆದರೂ ಹಗರಣ, ಹಗರಣ ಎಂದು ಬೊಬ್ಬೆ ಹಾಕುತ್ತಾ ಸುಳ್ಳು ಆರೋಪ ಹೊರಿಸುತ್ತಿದ್ದಾರೆ. ಇದಕ್ಕೆ ನೀವ್ಯಾರೂ ಸೊಪ್ಪು ಹಾಕಬೇಡಿ, ನಂಬಬೇಡಿ ಎಂದು ಜನತೆಗೆ ಕರೆ ನೀಡಿದರು.

ಯಡಿಯೂರಪ್ಪ ಅವರು ಇಳಿ ವಯಸ್ಸಲ್ಲಿ ಲೈಂಗಿಕ ದೌರ್ಜನ್ಯ ನಡೆಸಿ ಪೋಕ್ಸೋ ಕೇಸಲ್ಲಿ ಇದ್ದಾರೆ, ನಾಚಿಕೆ ಆಗಲ್ವಾ ಎಂದು ಮೂದಲಿಸಿದರು.

ಬಿಜೆಪಿ, ಜೆಡಿಎಸ್ ಅಧಿಕಾರದಲ್ಲಿದ್ದಾಗ ನಡೆಸಿದ್ದು ಒಂದಾ, ಎರಡಾ ಹಗರಣಗಳು. ಸುಪ್ರೀಕೋರ್ಟ್‌ನಲ್ಲಿ ತಮ್ಮ ಹಗರಣಗಳಿಗೆ ತಡೆಯಾಜ್ಞೆ ತಂದಿದ್ದಾರೆ, ಇವರು ನನ್ನ ರಾಜೀನಾಮೆ ಕೇಳುತ್ತಿದ್ದಾರೆ, ಇವರಿಗೆ ನಾಚಿಕೆ ಆಗಲ್ವಾ ಎಂದರು.

ಯಡಿಯೂರಪ್ಪ ಅವರು ಚೆಕ್‌ನಲ್ಲಿ ಲಂಚ ಪಡೆದು ಜೈಲಿಗೆ ಹೋದರು, ಆರ್.ಅಶೋಕ್, ವಿಜಯೇಂದ್ರ ಇವರೆಲ್ಲರೂ ಜೈಲಿಗೆ ಹೋಗಬೇಕಾದವರು. ಇವರಿಗೆ ನನ್ನ ಬಗ್ಗೆ ಮಾತನಾಡುವ ಯಾವ ಯೋಗ್ಯತೆ ಇದೆ?

ನಾನು 15 ಬಜೆಟ್ ಮಂಡಿಸಿದವನು, ನನಗೆ ಹಣದ ಮೋಹ ಇದ್ದಿದ್ದರೆ ಕೋಟಿ ಕೋಟಿ ಮಾಡಬಹುದಿತ್ತು, ಇಷ್ಟು ದಿನವಾದರೂ ನನಗೆ ಮೈಸೂರಲ್ಲಿ ಮನೆ ಇಲ್ಲ, ಈಗ ಕಟ್ಟಿಸುತ್ತಿದ್ದೇನೆ, ಹಿಂದಿದ್ದ ಮನೆ ಸಾಲ ತಗೊಂಡು ಕಟ್ಟಿಸಿದ್ದೆ, ಸಾಲ ತೀರಿಸಲಾಗದೇ ಆ ಮನೆ ಮಾರಿಬಿಟ್ಟೆ. ಬಾಡಿಗೆ ಮನೆಯಲ್ಲಿ ಇದ್ದುಕೊಂಡೇ ವಿಧಾನಸಭೆ, ಲೋಕಸಭೆ ಚುನಾವಣೆ ಮಾಡಿದೆ, ಈಗ ಕಟ್ಟುತ್ತಿರುವ ಮನೆ ಬಿಟ್ಟು ನನ್ನ ಹೆಸರಲ್ಲಿ ಒಂದೇ ಒಂದು ಸೈಟು ಇದ್ದರೆ ತೋರಿಸಿ ಎಂದು ಸವಾಲು ಹಾಕಿದರು.

## ಕೊಮಾರನಹಳ್ಳಿ ಕಾರಣಿಕೋತ್ಸವಕ್ಕೆ ಜನ ಸಾಗರ ಮಳೆಯನ್ನು ಲೆಕ್ಕಿಸದೇ ಕಾರಣಿಕ ಕೇಳಿದ ಜನ



ಮಲೇಬೆನ್ನೂರು, ಆ.9- ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಕೆರೆ ಅಂಗಳದಲ್ಲಿ ಶುಕ್ರವಾರ ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ಹರಳಹಳ್ಳಿ ಶ್ರೀ ಆಂಜನೇಯ ಸ್ವಾಮಿಯ ಕಾರಣಿಕೋತ್ಸವವು ಜಿಟಿ ಜಿಟಿ ಮಳೆಯ ನಡುವೆಯೂ ಜಾತ್ರೆ, ಸಂಭ್ರಮದೊಂದಿಗೆ ಜರುಗಿತು.

ಪ್ರತಿ ವರ್ಷ ನಾಗರ ಪಂಚಮಿ ಹಬ್ಬದ ಅಂಗವಾಗಿ ಈ ಕಾರಣಿಕೋತ್ಸವಕ್ಕೆ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳ ಸಾವಿರಾರು ಜನ ಭಕ್ತರು ಸಾಕ್ಷಿಯಾಗುತ್ತಾರೆ.

ಹರಳಹಳ್ಳಿಯ ಶ್ರೀ ಆಂಜನೇಯ ಸ್ವಾಮಿ, ಹಾಲಿವಾಣದ ಏಳೂರು ಕರಿಯಮ್ಮ, ಯಕ್ಕನಹಳ್ಳಿಯ ಶ್ರೀ ಬಸವೇಶ್ವರ ಸ್ವಾಮಿ, ತಿಮ್ಲಾಪುರದ ಆಂಜನೇಯ ಸ್ವಾಮಿ, ಉಡಸಲಮ್ಮ, ದಿಬ್ಬದಹಳ್ಳಿಯ ಆಂಜನೇಯ ಸ್ವಾಮಿ, ಕೊಮಾರನಹಳ್ಳಿಯ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ, ಶ್ರೀ ಆಂಜನೇಯ ಸ್ವಾಮಿ, ಶ್ರೀ ಬೀರಲಿಂಗೇಶ್ವರ ಸ್ವಾಮಿ ಮತ್ತು ಮಲೇಬೆನ್ನೂರಿನ ಜೋಡಿ ಆಂಜನೇಯ ಸ್ವಾಮಿ, ಶ್ರೀ ಬಸವೇಶ್ವರ ಸ್ವಾಮಿ, ಗ್ರಾಮದೇವತೆ ಏಕನಾಥೇಶ್ವರಿ, ಕೋಡಿ ಮಾರೇಶ್ವರಿ, ದುರ್ಗಾಂಬಿಕೆ ದೇವರುಗಳ ಸಾನ್ನಿಧ್ಯದಲ್ಲಿ ಈ ಕಾರಣಿಕ ನಡೆಯಿತು.

30 ಸೆಕೆಂಡ್‌ನಲ್ಲಿ ಹೇಳುವ ಈ ಕಾರಣಿಕಕ್ಕಾಗಿ ಸಾವಿರಾರು ಜನ ಗಂಟೆಗಟ್ಟಲೇ ಕಾತುರದಿಂದ ಕಾದು ನಿಂತಿರುತ್ತಾರೆ. ಆ 30 ಸೆಕೆಂಡ್‌ನಲ್ಲಿ ಹೇಳಿದ ಕಾರಣಿಕ ಈ ರೀತಿ ಇದೆ. 'ಮುತ್ತಿನ ರಾಶಿಗೆ ಸರ್ಪ ಸುತ್ತಿತಲೇ, ಸರ್ಪಕ್ಕೆ ಹದ್ದು ಹಾಲು ಉಣಿಸಿತಲೇ ಅನ್ನನೀರು ಸಂತೃಷ್ಠಿ' ಈ ಕಾರಣಿಕಕ್ಕೆ ಮಳೆ, ಬೆಳೆ ಮತ್ತು ಜನರ ಸುಖ - ದುಃಖಕ್ಕೆ ಸಂಬಂಧಪಟ್ಟಿದ್ದು ಎನ್ನಲಾಗಿದೆ.

ಕಾರಣಿಕ ಹೇಳುವ ವ್ಯಕ್ತಿ ಬಾಣ ಏರುವ ಮೊದಲೇ ಸ್ವಲ್ಪ ಮಳೆ ಬಂತು. ಕಾರಣಿಕ ಹೇಳುವಾಗಲು ಸ್ವಲ್ಪ ಮಳೆ ಬಂತು. ಆದರೂ ಸಹ ಜನ ಮಾತ್ರ ಕದಡದೇ ನಿಂತಲ್ಲಿ ನಿಂತು ಕಾರಣಿಕ ಕೇಳಿದ್ದು, ಗಮನ ಸೆಳೆಯಿತು.

ಕಾರಣಿಕದ ನಂತರ ಜನ ಕಾರ-ಮಂಡಕ್ಕಿ-ಮಿರ್ಚಿ ಸವಿದು ಜಾತ್ರೆ ಕೆರೆಗೆ ಕಾಲ ಭಾಗದಷ್ಟು ನೀರು ಬಂದಿದ್ದು, ಕಾರಣಿಕಕ್ಕೆ ಮೆರೆಗು ತಂದಿತು.

ಪಿಎಸ್‌ಐಗಳಾದ ಪ್ರಭಾ ಕೆಳಗಿನ ಮಳಿ, ಮಹಾದೇವ ಅವರ ನೇತೃತ್ವದಲ್ಲಿ ಪೊಲೀಸರು ಹೆದ್ದಾರಿಯಲ್ಲಿ ಬಂದೋಬಸ್ತ್ ಕೈಗೊಂಡಿದ್ದರು.

## 'ಬಂಗಾರದ ಮಣ್ಣಿನಲ್ಲಿ ಬೆಳ್ಳಿಲಿಂಗ ಒಡಮೂಡಿತು, ಆ ಲಿಂಗದ ಮೇಲೆ ಕಾಳಿಂಗ ಸರ್ಪ ಮುತ್ತಿತು, ಆ ಸರ್ಪಕ್ಕೆ ಗರುಡ ಕುಕ್ಕಿತಲೇ ಎಚ್ಚರ'



ಹರಿಹರ, ಆ. 9- 'ಬಂಗಾರದ ಮಣ್ಣಿನಲ್ಲಿ ಬೆಳ್ಳಿಲಿಂಗ ಒಡಮೂಡಿತು, ಆ ಲಿಂಗದ ಮೇಲೆ ಕಾಳಿಂಗ ಸರ್ಪ ಮುತ್ತಿತು, ಆ ಸರ್ಪಕ್ಕೆ ಗರುಡ ಕುಕ್ಕಿತಲೇ ಎಚ್ಚರ' ಎಂದು ಜಿಗಳಿ ರಂಗನಾಥ ಸ್ವಾಮಿಯ ಕಾರಣಿಕವನ್ನು ಪೂಜಾರ್ ಬಸವರಾಜ್ ಸ್ವಾಮಿಗಳು ನುಡಿದರು.

ನಗರದ ಸಂಗಮೇಶ್ವರ ಮತ್ತು ಮಹೇಶ್ವರ ದೇವಸ್ಥಾನದ ಆವರಣದಲ್ಲಿ ನಾಗರ ಪಂಚಮಿ ಹಬ್ಬದ ಅಂಗವಾಗಿ ಕಾರಣಿಕ ಹೇಳುವುದಕ್ಕಿಂತ ಮುಂಚಿತವಾಗಿ ಜಿಗಳಿ ರಂಗನಾಥ ಸ್ವಾಮಿಯ ಕಾರಣಿಕವನ್ನು ನುಡಿಯುವ ಬಸವರಾಜ್ ಸ್ವಾಮಿಗಳು ರಂಗನಾಥ ಸ್ವಾಮಿಯನ್ನು ಮೆರವಣಿಗೆ ಮೂಲಕ ತುಂಗಭದ್ರಾ ನದಿಗೆ ಕರೆದೊಯ್ದು ನದಿಯಲ್ಲಿ ವಿಶೇಷ ಪೂಜೆ, ಮಹಾಮಂಗಳಾರತಿ ಸೇರಿದಂತೆ ಹಲವು ಬಗೆಯ ಪೂಜಾ ಕಾರ್ಯಗಳನ್ನು ನೆರವೇರಿಸಿ ನಂತರ ಕಂಬ ಏರಿ ಕಾರಣಿಕ ನುಡಿದರು.

ಈ ವೇಳೆ ನಗರದ ಮಾಜೇನಹಳ್ಳಿ ಗ್ರಾಮದೇವತೆ ಊರಮ್ಮದೇವಿ, ಪೇಟೆ ಆಂಜನೇಯ ಸ್ವಾಮಿ, ಕಸಬಾ ದುರ್ಗಾದೇವಿ, ಯಲವಟ್ಟಿ ಆಂಜನೇಯ ಸ್ವಾಮಿ, ಬೆಳ್ಳೂಡಿ ಬೀರಪ್ಪ, ಹನುಮ್ಮಪ್ಪ, ಚಂದ್ರಗುತ್ಯಮ್ಮ, ಹಳೇಬಾತಿ ಆಂಜನೇಯ ಸ್ವಾಮಿ ಸೇರಿದಂತೆ ವಿವಿಧ ಗ್ರಾಮದ ದೇವರುಗಳು ಹಾಜರಿದ್ದವು.

ಈ ಸಂದರ್ಭದಲ್ಲಿ ಅಮರಾವತಿ ಗೌಡ್ರು ಮಹದೇವಪ್ಪ, ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ, ಕರಿಬಸಪ್ಪ ಕಂಚಿಕೇರಿ, ಲೋಕೇಶ್ ಮೂರ್ಕಲ್, ಪೃಥ್ವಿ ಕುಮಾರ್, ಕೃಷ್ಣ ಪಿ. ರಾಜೋಳ್ಳಿ, ಗುರು ಬಸವರಾಜ್, ಅತೀಶ್, ಸಿ.ಕೆ. ಗುರುಪ್ರಸಾದ್, ಹಿಂದೂ ಜಾಗರಣ ವೇದಿಕೆಯ ಚಂದನ್ ಮೂರ್ಕಲ್, ಶಿವು, ಮಹೇಶ್, ಜಿಗಳಿ ಬಸವನಗೌಡ್ರು, ಜಿ.ಎಂ. ಆನಂದಪ್ಪ, ಕೆ.ಆರ್. ರಂಗಪ್ಪ, ಇಂದೂಧರ್, ಗೋಪೋಜಿ ಆನಂದಪ್ಪ, ಪೂಜಾರ್ ನಾಗರಾಜ್, ಯಲವಟ್ಟಿ ಮಂಜುನಾಥ್, ಕೆ.ಬಿ. ಸತೀಶ್ ಯಲವಟ್ಟಿ, ಮಾಕನೂರು ಪರಸಪ್ಪ, ನಟರಾಜ್, ದೇವೇಂದ್ರಪ್ಪ, ಜಗದೀಶ್, ಜಯ್ಯಣ್ಣ, ಚಂದ್ರಪ್ಪ, ಪ್ರಕಾಶ್, ಸಿದ್ದಲಿಂಗಪ್ಪ, ಬೀರಪ್ಪ, ಜಲೀಲ್ ಸಾಬ್ ಇತರರು ಹಾಜರಿದ್ದರು.

## ಕುರುಹಿನಶೆಟ್ಟಿ ಸಮಾಜದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಆ. 9 - ಕರುಹಿನಶೆಟ್ಟಿ ಸಮಾಜ ದಾವಣಗೆರೆ ಹಾಗೂ ಕೇಂದ್ರ ಕಛೇರಿ ಬೆಂಗಳೂರು ವತಿಯಿಂದ 2023-24ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ತರಗತಿಯಲ್ಲಿ ಶೇ. 85ರಷ್ಟು ಅಂಕ ಗಳಿಸಿದ ಅರ್ಹ ಅಭ್ಯರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಗುವುದು. ಅರ್ಜಿ ಸಲ್ಲಿಸಲು ದಿನಾಂಕ ಇದೇ ದಿನಾಂಕ 31 ಕೊನೆಯ ದಿನವಾಗಿರುತ್ತದೆ. ಅರ್ಹ ವಿದ್ಯಾರ್ಥಿಗಳು ಶ್ರೀ ನೀಲಕಂಠೇಶ್ವರ ದೇವಸ್ಥಾನ, ಕುರಹಿನಶೆಟ್ಟಿ ಸಮಾಜ, ಕೆ.ಟಿ.ಜೆ. ನಗರ, 14ನೇ ಕ್ರಾಸ್, 4ನೇ ಮೇನ್, ದಾವಣಗೆರೆ, ಮೊ : 94492 93249, 86604 60744ಗೆ ಸಂಪರ್ಕಿಸಬಹುದು.

## ಬ್ಯಾಂಕ್ ಖಾತೆ : ನಾಲ್ವರು ನಾಮಿನಿಗಳಿಗೆ ಮಸೂದೆ ಮಂಡನೆ

ನವದೆಹಲಿ, ಆ. 9 - ಬ್ಯಾಂಕ್ ಖಾತೆದಾರರು ನಾಲ್ವರು ನಾಮಿನಿಗಳನ್ನು ಹೊಂದಲು ಅವಕಾಶ ನೀಡುವ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ. ಇದು ಠೇವಣಿದಾರರಿಗೆ ಹೆಚ್ಚಿನ ರಕ್ಷಣೆ ನೀಡಲಿದೆ ಹಾಗೂ ಗ್ರಾಹಕರಿಗೆ ನೆರವಾಗಲಿದೆ. ಬ್ಯಾಂಕಿಂಗ್ ಕಾನೂನುಗಳ ತಿದ್ದುಪಡಿ ಮಸೂದೆ ಮಂಡಿಸಿ ಮಾತನಾಡಿದ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ, ಬ್ಯಾಂಕ್ ಖಾತೆ ಹಾಗೂ ಲಾಕರ್ ಸೇರಿದಂತೆ ಹಲವು ವಿಷಯಗಳಲ್ಲಿ ಬಹು ನಾಮಿನಿಗಳನ್ನು ಹೊಂದಲು ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು. ಕ್ಲೇಮುಗಳಿಲ್ಲದ ಡಿವಿಡೆಂಡ್ ಶೇರು ಹಾಗೂ ಬಡ್ಡಿಯನ್ನು ಹೂಡಿಕೆದಾರರ ಶಿಕ್ಷಣ ಹಾಗೂ ರಕ್ಷಣಾ ನಿಧಿಗೆ ವರ್ಗಾಯಿಸಲಾಗುವುದು ಇದರಿಂದ ಹೂಡಿಕೆದಾರರ ಹಿತ ರಕ್ಷಿಸಲು ಸಾಧ್ಯವಾಗಲಿದೆ ಎಂದು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

## ಗ್ರಾಮೀಣ ಭಾಗಕ್ಕೆ 2 ಕೋಟಿ ಮನೆ

ನವದೆಹಲಿ, ಆ. 9 - ಪ್ರಧಾನ ಮಂತ್ರಿ ಆವಾಸ್ ಯೋಜನೆ - ಗ್ರಾಮೀಣ ಅನ್ವಯ ಗ್ರಾಮೀಣ ಭಾಗದಲ್ಲಿ ಎರಡು ಕೋಟಿ ಹೆಚ್ಚುವರಿ ಮನೆಗಳನ್ನು ನಿರ್ಮಿಸುವ ಪ್ರಸ್ತಾಪಕ್ಕೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

## ಮೈಸೂರು ಚಲೋ ಪಾದಯಾತ್ರೆಯಲ್ಲಿ ಮಹಾನಗರ ಪಾಲಿಕೆ ಮಾಜಿ ಸದಸ್ಯರ ತಂಡ



ದಾವಣಗೆರೆ, ಆ. 9- ಮೈಸೂರು ಚಲೋ ಪಾದಯಾತ್ರೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರೊಂದಿಗೆ ಸ್ಥಳೀಯ ಮಹಾನಗರ ಪಾಲಿಕೆಯ ಮಾಜಿ ಸದಸ್ಯರುಗಳಾದ ಹೆಚ್.ಎನ್. ಶಿವಕುಮಾರ್, ಆವರಗೆರೆ ಜಿ. ಸುರೇಶ್, ಹೆಚ್.ಎನ್. ಗುರುನಾಥ್, ಮುಖಂಡರುಗಳಾದ ಎ.ವೈ. ಪ್ರಕಾಶ್, ಶಿವರಾಜ್ ಪಾಟೀಲ್ ಹಾಗೂ ಮತ್ತಿತರರು ಈ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

## ಕುಂಬಳೂರಿನಲ್ಲಿ ಹನುಮಪ್ಪನ ಕಾರಣಿಕ



ಮಲೇಬೆನ್ನೂರು, ಆ.9- ನಾಗರ ಪಂಚಮಿ ಅಂಗವಾಗಿ ಕುಂಬಳೂರು ಗ್ರಾಮದಲ್ಲಿ ಶ್ರೀ ಹನುಮಂತ ದೇವರ ಕಾರಣಿಕ ಶುಕ್ರವಾರ ಸಂಜೆ ಗ್ರಾಮಸ್ಥರ ಸಮ್ಮುಖದಲ್ಲಿ ಜರುಗಿತು. 'ಬಂಗಾರದ ಜಿಂಕೆ ಜಿಗಿ ಜಿಗಿದು ಹಾರಿತು. ದೇವೇಂದ್ರ ಐರಾವತ ಭೂಮಿಗಿಳಿದೀತು. ಕರಿಮಾರಿ ಊರೂರು ತಿರಿಗ್ಯಾಳು ಸಂಪು' ಎಂದು ಹನುಮಪ್ಪನನ್ನು ಹೊತ್ತ ಕರಡೆಪ್ಪರ ಆನಂದಪ್ಪ ಕಾರಣಿಕ ನುಡಿದರು.

## ಬುರ್ಖಾ, ಹಿಜಾಬ್ ನಿಷೇಧಕ್ಕೆ ತಡೆ

(3ನೇ ಪುಟದಿಂದ) ವಿದ್ಯಾರ್ಥಿನಿಯರು ತಾವು ಬಯಸುವ ಉಡುಗೆ ತೊಡುವ ಸ್ವಾತಂತ್ರ್ಯ ಹೊಂದಿರಬೇಕು. ಕಾಲೇಜು ತಿಲಕ ಇಲ್ಲವೇ ಹಣೆಬೊಟ್ಟನ್ನು ನಿಷೇಧಿಸಿಲ್ಲ. ಇವು ಧರ್ಮವನ್ನು ಸೂಚಿಸುತ್ತವೆ. ವಿದ್ಯಾರ್ಥಿಗಳ ಹೆಸರು ಧರ್ಮವನ್ನು ತೋರಿಸುವುದಿಲ್ಲವೇ? ಎಂದು ನ್ಯಾಯಾಲಯ ಪ್ರಶ್ನಿಸಿದೆ. ಆದರೆ, ಶಾಲಾ ಕೋಣೆಯ ಒಳಗೆ ಬಾಲಕಿಯರು ಬುರ್ಖಾ ಧರಿಸುವಂತಿಲ್ಲ ಹಾಗೂ ಕಾಲೇಜಿನ ಒಳಗೆ ಧಾರ್ಮಿಕ ಚಟುವಟಿಕೆಗಳನ್ನು ನಡೆಸುವಂತಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಮಧ್ಯಂತರ ಆದೇಶವನ್ನು ಯಾರೂ ದುರ್ಬಳಕೆ ಮಾಡಿಕೊಳ್ಳಬಾರದು. ದುರ್ಬಳಕೆಯಾದಲ್ಲಿ ಕಾಲೇಜು ಹಾಗೂ ಶಿಕ್ಷಣ ಸಂಸ್ಥೆಗಳು ನ್ಯಾಯಾಲಯದ ಬಳಿ ಬರಬಹುದು ಎಂದು ತಿಳಿಸಲಾಗಿದೆ.

ಕಾಲೇಜಿನ ಒಳಗೆ ನಿಷೇಧಿಸುವ ಕಾಲೇಜಿನ ನಿರ್ಧಾರವನ್ನು ಬಾಂಬೆ ಹೈಕೋರ್ಟ್ ಎತ್ತಿ ಹಿಡಿದಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು.

## ಕಡ್ಲೇಬಾಳ್‌ನಲ್ಲಿ ಇಂದು ಸುಬ್ರಮಣ್ಯ ರಥೋತ್ಸವ



ದಾವಣಗೆರೆ ಸಮೀಪದ ಶ್ರೀ ಕ್ಷೇತ್ರ ಕಡ್ಲೇಬಾಳು ಗ್ರಾಮದಲ್ಲಿ ಇಂದು ಶ್ರೀ ನಾಗಸುಬ್ರಹ್ಮೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಷಷ್ಠಿಯ ದಿನ ಪ್ರಯುಕ್ತ ಸ್ವಾಮಿಗೆ ಪಂಚಾಮೃತ ಅಭಿಷೇಕ, ಸುಬ್ರಮಣ್ಯಸ್ವಾಮಿ ಮೂಲಮಂತ್ರ ಹೋಮ, ಆಶ್ಲೇಷ ಬಲಿ ಸರ್ಪ ಹೋಮ, ಸುಬ್ರಮಣ್ಯ ಸ್ವಾಮಿಯ ರಥೋತ್ಸವವಿರುತ್ತದೆ.









### ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿ.ಜೆ.ಎಂ. ನ್ಯಾಯಾಲಯ ದಾವಣಗೆರೆ

**ಎಫ್.ಡಿ.ಪಿ. ನಂ. 25/2023**

ಅರ್ಜಿದಾರರು : ಶ್ರೀಮತಿ ಮಂಗಳಗೌರಿ ಬಿನ್ ಸಿದ್ದಬಸಪ್ಪ ಕೋಂ ನಾಗರಾಜಪ್ಪ, ವಯಸ್ಸು 58 ವರ್ಷ, ವಾಸ : ನಾಗನೂರು ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ – ವಿರುದ್ಧ -

ಎದುರುದಾರರು : ರುದ್ರೇಶಪ್ಪ, ಪೌತಿ ವಾರಸುದಾರರು ಸಾವಿತ್ರಮ್ಮ ಹಾಗೂ ಇತರರು

ಎದುರುದಾರರು ನೋಟೀಸ್ ದಾರರು : 1 (ಸಿ)ವಿಶಾಲ ಯಾನೇ ವಿಶಾಲಾಕ್ಷಿ ಬಿನ್ ರುದ್ರೇಶಪ್ಪ, ಕೋಂ ನಾಗರಾಜ, ವಯಸ್ಸು 50 ವರ್ಷ, ವಾಸ : ನರಗನಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು : ಜಿಲ್ಲೆ ಹಾಲಿ ವಾಸ : ಹುಚ್ಚವ್ವನಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು : ಜಿಲ್ಲೆ

**ಸಿ.ಪಿ.ಸಿ ಆದೇಶ 5 ನಿಯಮ 20 ರ ಅಡಿಯಲ್ಲಿ 2 ಮತ್ತು ಎದುರುದಾರ ನಂ.1(ಸಿ) ರವರ ವಿರುದ್ಧ ನೀಡಲಾದ ಪ್ರಕಟಣಾ ನೋಟೀಸು**

ಮೇಲ್ಕಂಡ ಪ್ರಕರಣವು ದಾವಣಗೆರೆಯ ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿ.ಜೆ.ಎಂ. ನ್ಯಾಯಾಲಯವು ಅಸಲು ದಾವಾ ನಂ.242/2022ರಲ್ಲಿ ಆದ ಜಡ್ಜ್‌ಮೆಂಟ್ ಡಿಕ್ರಿಯ ಪ್ರಕಾರ ದಾಖಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ನೀವು ಎದುರುದಾರ ನಂ.1(ಸಿ) ಆಗಿದ್ದು, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್ ಅನ್ನು ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ:25.09.2024 ರಂದು ಬೆಳಗ್ಗೆ 11-00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ : 06.08.2024 ರಂದು ಕೊಡಲ್ಪಟ್ಟಿದೆ.

| | |
|---|---|
| ಸಹಿ/- | ನ್ಯಾಯಾಲಯದ ಆದೇಶದ ಮೇರೆಗೆ |
| ಅರ್ಜಿದಾರರ ಪರ ವಕೀಲರು | ಸಹಿ /- ಶಿರಸ್ತೇದಾರರು |
| (ಷಣ್ಮುಖಪ್ಪ ಎಸ್.) | ಮಾನ್ಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಹಾಗೂ |
| ದಾವಣಗೆರೆ, ಮೊ : 99728 01588 | ಸಿ.ಜೆ.ಎಂ. ನ್ಯಾಯಾಲಯ, ದಾವಣಗೆರೆ. |

### ಸಾರ್ವಜನಿಕ ಪ್ರಕಟಣೆ

ದಾವಣಗೆರೆ ನಗರದ ಜಯನಗರ 'ಬಿ'ಬ್ಲಾಕ್ #1042/230 ವಾಸಿಯಾದ ವಾಸುದೇವ ಬಿ.ಎನ್. ಬಿನ್ ಎಸ್. ನಾಗರಾಜಪ್ಪ ಇವರು ನೀಡುವ ಸಾರ್ವಜನಿಕ ಪ್ರಕಟಣೆ. ನಾನು ಈ ಹಿಂದೆ ಶ್ರೀಮತಿ ಬಿ.ಎಲ್. ರೂಪ ಇವರಿಂದ ಷೆಡ್ಯೂಲ್ ಇ-ಸ್ವತ್ತನ್ನು ಖರೀದಿ ಮಾಡಿರುತ್ತೇನೆ. ಶ್ರೀಮತಿ ಬಿ.ಎಲ್. ರೂಪ ಇವರು ಈ ಹಿಂದೆ ಇ-ಸ್ವತ್ತನ್ನು ಎಸ್. ಮಂಜಪ್ಪ ಮತ್ತು ನಾಗವೇಣಿ ಇವರಿಂದ ಕ್ರಯಕ್ಕೆ ಪಡದುಕೊಂಡಿದ್ದು ಸದರಿ ಕ್ರಯಪತ್ರವು ಚಿತ್ರದುರ್ಗ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ (CDG-1-02504-2020-21) ದಿ:07/08/2020 ರಂದು ರಿಜಿಸ್ಟರ್ ಆಗಿರುತ್ತದೆ. ಸದರಿ ಕ್ರಯ ಪತ್ರವು ನಾನು ದಾವಣಗೆರೆ ಮನೆಯನ್ನು ಬದಲಾವಣೆ ಮಾಡುವಾಗ ಈ ಮೂಲ ಪತ್ರ ಕಳೆದು ಹೋಗಿರುತ್ತದೆ. ಕಳೆದು ಹೋದ ಪತ್ರದ ಬಗ್ಗೆ ಪೊಲೀಸ್ ಇಲಾಖೆಯಲ್ಲಿ ದಿ:08/08/2024 ರಂದು ದೂರು ದಾಖಲಿಸಿರುತ್ತೇನೆ. ಈ ಮೇಲ್ಕಂಡ ಕ್ರಯ ಪತ್ರವು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ವಿಳಾಸಕ್ಕೆ ತಲುಪಿಸಬೇಕೆಂದು ಈ ಮೂಲಕ ಸಾರ್ವಜನಿಕ ಪ್ರಕಟಣೆ ನೀಡಿರುತ್ತೇನೆ. (ಷೆಡ್ಯೂಲ್ ಚಿತ್ರದುರ್ಗ ತಾಲ್ಲೂಕಿನ ಬೀರಾವರ ಗ್ರಾಮದ ಸರ್ವೇ ನಂ-37/4 ವಿಸ್ತೀರ್ಣ 01 ಎಕರೆ 01 ಗುಂಟೆ).

ವಿಳಾಸ, #1042/230 ಜಯನಗರ 'ಬಿ'ಬ್ಲಾಕ್ ದಾವಣಗೆರೆ-577004. ಫೊ: 9113645775.







## ಉಕ್ರೇನ್ ದಾಳಿ : ರಷ್ಯಾದಲ್ಲಿ ತುರ್ತು ಪರಿಸ್ಥಿತಿ

ಕೀವ್, ಆ. 9 - ಕರ್‌ಸ್ಕ್ ಪ್ರದೇಶದ ಮೇಲೆ ಉಕ್ರೇನ್ ದಾಳಿ ನಡೆಸಿರುವ ಹಿನ್ನೆಲೆಯಲ್ಲಿ, ರಷ್ಯಾ ಒಕ್ಕೂಟ ಹಂತದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದೆ. ಈ ಪ್ರದೇಶಕ್ಕೆ ಹೆಚ್ಚಿನ ಪಡೆಗಳನ್ನು ರವಾನಿಸಲಾಗಿದೆ.

ರಷ್ಯಾ ಹಾಗೂ ಉಕ್ರೇನ್ ಸಮರ ಆರಂಭವಾದ ನಂತರ ಇದೇ ಮೊದಲ ಬಾರಿಗೆ ಉಕ್ರೇನ್ ಪಡೆಗಳು ದೊಡ್ಡ ಮಟ್ಟದಲ್ಲಿ ಗಡಿ ದಾಟಿದ್ದವು. ಇದಾದ ನಾಲ್ಕು ದಿನಗಳ ನಂತರ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ. ಈ ನಡುವೆ ರಷ್ಯಾದ ವಿಮಾನಗಳು ಉಕ್ರೇನ್ ಶಾಪಿಂಗ್ ಮಾಲ್ ಮೇಲೆ ಕ್ಷಿಪಣಿ ದಾಳಿ ನಡೆಸಿವೆ. ಇದರಿಂದಾಗಿ 11 ಜನ ಮೃತಪಟ್ಟಿದ್ದಾರೆ ಹಾಗೂ 44 ಜನ ಗಾಯಗೊಂಡಿದ್ದಾರೆ. ಡೊನೆಟ್‌ಸ್ಕ್ ಪ್ರಾಂತ್ಯದಲ್ಲಿರುವ ಕೊಸ್ಟಿಯಾಂಟಿನಿವ್ಕದಲ್ಲಿರುವ ಮಾಲ್ ಮೇಲೆ ದಾಳಿ ನಡೆಸಲಾಗಿತ್ತು. ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲೂ ಈ ನಗರದಲ್ಲಿ ಮೇಲೆ ದಾಳಿ ನಡೆಸಲಾಗಿತ್ತು.

## ವಿದೇಶ ಪ್ರವಾಸ ಶುಭ ಹಾರೈಕೆ



ದಿನಾಂಕ : 10.08.2024ರ ಶನಿವಾರದಂದು ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಾ ದೇಶದ ಆರಿಜೋನ ರಾಜ್ಯದ ಆರಿಜೋನೋ ಸ್ಟೇಟ್ ಯೂನಿವರ್ಸಿಟಿಯಲ್ಲಿ Electrical Engineering (Signal Processing MSE) ವಿದ್ಯಾಭ್ಯಾಸಕ್ಕೆ ತೆರಳುತ್ತಿರುವ **ಶ್ರೀಮತಿ ರೂಪ ಎಂ.ಕೆ. ಶ್ರೀ ನಾಗರಾಜು ಪಿ.ಜೆ.** ಬೆಂಗಳೂರು ಇವರ ಪುತ್ರ

**ಚಿ. ಜಯಂತ್ ಪಿ.ಎನ್.** B.E., ETE ಅವರಿಗೆ ಶುಭ ಹಾರೈಸುವ

- ಶ್ರೀಮತಿ ವಜ್ರಮ್ಮ ಶ್ರೀ ಬಿ.ಎಂ. ಕೊಟ್ರೇಶ್
- ಶ್ರೀಮತಿ ಕವಿತಾ ಗಾಂಜಿ ಶ್ರೀ ಅಮರೇಶ್ ಗಾಂಜಿ, ಬೆಂಗಳೂರು
- ಶ್ರೀಮತಿ ರೇಖಾ ಬಿ.ಕೆ. ಶ್ರೀ ರವಿ ಟಿ.
- ಶ್ರೀಮತಿ ಕೆ.ಜಿ. ಲತಾ ಶ್ರೀ ಕುಮಾರ್ ಬಿ.ಕೆ.
- ಶ್ರೀಮತಿ ಶೋಭಾ ಬಿ.ಕೆ. ಶ್ರೀ ಗೋಪಿ ಎಸ್.
- ಶ್ರೀಮತಿ ಹರ್ಷಿತಾ ಆರ್.ಎಸ್. ಶ್ರೀ ಅಕ್ಷಯ್ ಗಾಂಜಿ, ಚಿಕಾಗೋ
- ಚಿ. ಅಕ್ಷತಾ ಗಾಂಜಿ
- ಕೀರ್ತನ್ ಆರ್.
- ನಿತಿನ್ ಆರ್.
- ಚಿನ್ಮಯಿ ಜಿ.
- ಜಿರಾಗ್ ಜಿ.
- ಯಶಸ್ ಬಿ.ಕೆ.
- ಗುರುಪ್ರಸಾದ್ ಹಾಗೂ ಬಂಧು-ಮಿತ್ರರು.

## ನಿವೃತ್ತ ಉಪನ್ಯಾಸಕ ತೋಟದರ್ ಮಹದೇವಪ್ಪ ನಿಧನ



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ನಿವಾಸಿ

**ತೋಟದರ್ ಮಹದೇವಪ್ಪ**

(ನಿವೃತ್ತ ಉಪನ್ಯಾಸಕರು, ನಳಂದ ಪಿಯು ಕಾಲೇಜು, ಜಗಳೂರು)

ಇವರು, ದಿನಾಂಕ 9.8.2024ರ ಶುಕ್ರವಾರ ಮಧ್ಯಾಹ್ನ 1.35ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಪತ್ನಿ,ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.08.2024ರ ಶನಿವಾರ ಮಧ್ಯಾಹ್ನ 12ಕ್ಕೆ ಎಲೆಬೇತೂರಿನ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬವರ್ಗ

ಪತ್ನಿ : ಅಕ್ಕಮಹಾದೇವಿ

ಮಕ್ಕಳು : ಟಿ. ಸಂತೋಷ, ಟಿ. ಸರಳ, ಟಿ. ಸಹನ ಹಾಗೂ ಅಳಿಯಂದಿರು, ಮೊಮ್ಮಕ್ಕಳು ಮತ್ತು ತೋಟದರ್ ವಂಶಸ್ಥರು ಬಂಧು-ಮಿತ್ರರು. ಮೊ : 98806 80038

## ಸವಿನೆನಪು



ಜನನ : 28.04.1939

ನಿಧನ : 10.08.2019

ಉಸಿರು ಹೋದರೂ ಹೆಸರು ಉಳಿಸಿದ

**ಲಿಂ. ಡಾ. ಎಸ್.ಹೆಚ್. ಪೂಜಾರ್**

ಮಕ್ಕಳ ತಜ್ಞರು

ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಪ್ರೀತಿ - ವಾತ್ಸಲ್ಯ - ಆದರ್ಶ - ಶಿಸ್ತು - ಪ್ರಾಮಾಣಿಕತೆ ಮತ್ತು ಶ್ರಮದ ಕಾಯಕತ್ವವು ನಮಗೆಲ್ಲಾ ಆದರ್ಶವಾಗಿವೆ. ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಧರ್ಮಪತ್ನಿ : ಶ್ರೀಮತಿ ರತ್ನ ಪೂಜಾರ್

ಪುತ್ರರು - ಸೊಸೆಯಂದಿರು :

ಡಾ. ಮಧು ಪೂಜಾರ್ ಮತ್ತು ಡಾ. ಸ್ನೇಹ ಮಧು

ಡಾ. ಮನೋಜ್ ಪೂಜಾರ್ ಮತ್ತು ಶ್ರೀಮತಿ ಶೃತಿ ಮನೋಜ್

ಮೊಮ್ಮಕ್ಕಳು ಹಾಗೂ ಬಂಧು - ಮಿತ್ರರು

ಸಿಬ್ಬಂದಿ ವರ್ಗದವರು :

ಪೂಜಾ ಮಕ್ಕಳ ಆಸ್ಪತ್ರೆ ಮತ್ತು ಪೂಜಾ ಹೆಲ್ತ್‌ಕೇರ್

ಪಿ.ಜೆ. ಬಡಾವಣೆ, ದಾವಣಗೆರೆ.

## ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ. 403/4-ಎ, ಡಾ॥ ಮೋದಿ ಕಣ್ಣಿನ ಆಸ್ಪತ್ರೆ ರಸ್ತೆ,
ಪಿ.ಜೆ. ಬಡಾವಣೆ, ದಾವಣಗೆರೆ-577 002. ಫೋ. : 255974




ಎನ್.ಜೆ. ಗುರುಸಿದ್ದಯ್ಯ
ಡಿಐಸಿ, ಅಧ್ಯಕ್ಷರು



ಕೆ.ಎಸ್. ಮಹೇಶ್ವರಪ್ಪ,
ಎಂ.ಎಸ್ಸಿ,
ನಿರ್ದೇಶಕರು



ಬಿ.ಹೆಚ್. ಪರಶುರಾಮಪ್ಪ
ಸಿವಿಲ್ ಇಂಜಿನಿಯರ್
ನಿರ್ದೇಶಕರು



ನಿರಂಜನ್ ನಿಶಾನಿಮಠ್, ಎಂ.ಎ.
ಉಪಾಧ್ಯಕ್ಷರು



ಶ್ರೀಮತಿ ಎನ್.ಎಂ. ಪಂಕಜ ವೀರಯ್ಯ
ನಿರ್ದೇಶಕರು



ವಿಕಾಸ್ ಕುಮಾರ್
ಬಿ.ಕಾಂ.,
ನಿರ್ದೇಶಕರು



ಬಂಡಿವಾಡ ಎನ್.ವ್ಹಿ.,
ಡಿ.ಐ.ಎ.,
ನಿರ್ದೇಶಕರು



ರವೀಂದ್ರನಾಥ್ ಕೆ.ಆರ್.
ಬಿ.ಇ. ಸಿವಿಲ್ ಇಂಜಿನಿಯರ್,
ನಿರ್ದೇಶಕರು



ಶ್ರೀಮತಿ ಕೌಶಲ್ಯ ಆರ್.,
ಬಿ.ಎ. ಬಿ.ಎಡ್,
ನಿರ್ದೇಶಕರು



ಹೆಚ್.ವಿ. ವಿರೂಪಾಕ್ಷ
ಬಿ.ಇ., ಸಿವಿಲ್, ಎಂ.ಟೆಕ್., (ಪಿಹೆಚ್‌ಡಿ)
ನಿರ್ದೇಶಕರು



ಅಭಿಷೇಕ್ ಬಿ.ಜೆ. (ಬೇತೂರು)
ಬಿ.ಬಿ.ಎ.
ನಿರ್ದೇಶಕರು



ಶ್ರೀಮತಿ ಲತಾ ಹಾಲೇಶ್
ಬಿ.ಕಾಂ. (ಎಂ.ಬಿ.ಎ.)
ನಿರ್ದೇಶಕರು



ಡಾ. ಎಂ. ಸೋಮಶೇಖರಪ್ಪ
ಎಂ.ಎ., ಎಲ್.ಎಲ್.ಬಿ., ಪಿ.ಹೆಚ್.ಡಿ.
ವೃತ್ತಿಪರ ನಿರ್ದೇಶಕರು



ಸುಮಂತ್ ಎಂ.ಎಸ್.,
ಎಂ.ಕಾಂ. ಸಿ.ಎ.,
ವೃತ್ತಿಪರ ನಿರ್ದೇಶಕರು

### 32ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮೇಲ್ಕಂಡ ಬ್ಯಾಂಕಿನ 2023-24ನೇ ಸಾಲಿನ 32ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 10.08.2024ನೇ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಷ॥ಬ್ರ॥ಡಾ॥ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳು, ಎಂ.ಸಿ.ಸಿ. "ಬಿ" ಬ್ಲಾಕ್, ಶಿವಾಚಾರ್ಯ ನಿಕೇತನ ಹಿರೇಮಠ, ದಾವಣಗೆರೆ ಇಲ್ಲಿ ಕರೆಯಲಾಗಿದೆ. ವಾರ್ಷಿಕ ವರದಿಯ ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ಬ್ಯಾಂಕಿನ ಮಾನ್ಯ ಸದಸ್ಯರು ಸಭೆಗೆ ಸಕಾಲಕ್ಕೆ ಆಗಮಿಸಬೇಕೆಂದು ಕೋರಲಾಗಿದೆ.

ಕಾರ್ಯನಿರ್ವಾಹಕ ಮಂಡಳಿಯ ಅಪ್ಪಣೆಯ ಮೇರೆಗೆ ಸಹಿ/- ಅಧ್ಯಕ್ಷರು/ಉಪಾಧ್ಯಕ್ಷರು


## ರವಿತೇಜ

ವರಮಹಾಲಕ್ಷ್ಮಿ ಹಬ್ಬದ ವಿಶೇಷ ರಿಯಾಯಿತಿ



20% + 10%
ಎಲ್ಲಾ ರೇಷ್ಮೆ ಸೀರೆಗಳ ಮೇಲೆ

10% + 10%
ಎಲ್ಲಾ ಬಟ್ಟೆಗಳ ಮೇಲೆ

50%
ಆಯ್ದ ಬಟ್ಟೆಗಳ ಮೇಲೆ

ಶುಭ ಸಮಾರಂಭಗಳಿಗೆ ಇಂದೇ ಭೇಟಿ ನೀಡಿ, ರಿಯಾಯಿತಿಯ ಸದುಪಯೋಗ ಪಡೆದುಕೊಳ್ಳಿ

Raviteja Textiles

ರವಿತೇಜ ಗಾರ್ಮೆಂಟ್ಸ್
ಚಾಮರಾಜಪೇಟೆ, ಫೋ : 98800 32999

ರವಿತೇಜ'ಸ್
ವಿದ್ಯಾನಗರ, ಫೋ : 98803 82611

ರವಿತೇಜ ಕಿಡ್ಸ್
ಚಾಮರಾಜಪೇಟೆ, ಫೋ : 98800 32999

ರವಿತೇಜ ಮೆನ್ಸ್
ಚಾಮರಾಜಪೇಟೆ, ಫೋ : 98800 32999

ರವಿತೇಜ ಸಿಲ್ಕ್ಸ್ ಅಂಡ್ ಸ್ಯಾರೀಸ್
ವಿಜಯಲಕ್ಷ್ಮಿ ರಸ್ತೆ, ಫೋ : 98444 66844, 97419 53993

ರವಿತೇಜ ಫ್ಯಾಷನ್
ಚೇತನ ಹೋಟೆಲ್ ರಸ್ತೆ, ಫೋ : 95916 33871


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas